ಕೊರವಂಜಿ



ಅಕ್ಟೋಬರ್
೧೯೬೬

★

KURAVANJI
Kannada Monthly

ಸಂಪಾದಕರು:
ಶ್ರೀ॥ ರಾ. ಶಿ.

★

ಸಹಕಾರರು:

ಶ್ರೀ॥ ಶ್ರೀರಂಗ
ಶ್ರೀ॥ ಅ. ರಾ. ಸೇ.
ಶ್ರೀ॥ ರಾಮು
ಶ್ರೀ॥ ಹಾ. ರಾ.
ಶ್ರೀ॥ ಒಬ್ಬ
ಶ್ರೀ॥ ಕಿರಣ ಗುಲ್ಲೂರು
ಶ್ರೀಮತಿ॥ ಪ್ರೇಮಾಭಟ್
ಶ್ರೀ॥ ಕಮ್ಮಾರ್

ಇತ್ಯಾದಿ ಇತ್ಯಾದಿ

೨೫ ಪೈ.

ತಿಳಿನಗೆಯ ಮಾಸಪತ್ರಿಕೆ

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್

ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

ಕೊರವಂಜಿ

ಸಂಪುಟ ೨೫] ಅಕ್ಟೋಬರ್ ೧೯೬೬ [ಸಂಚಿಕೆ ೬

ಕು ಹ ಕಿ ಡಿ ಗ ಳು

ಪ್ರಧಾನ ಮಂತ್ರಿಗಳು ಸ್ತ್ರೀಯಾಗಿರುವುದರಿಂದ, ಎ. ಐ. ಸಿ. ಸಿ, ಸಭೆಯು ಸ್ತ್ರೀಮಲಯಾಳದ ಎರ್ನಾಕುಲಂನಲ್ಲಿ ನಡೆದುದು ಸಮಂಜಸ ಎಂದೊಬ್ಬರ ಅಂಬೋಣ.

* * * *

ಎರ್ನಾಕುಲಂ ಅಲ್ಲಿ ನಡೆದ ಎ. ಐ. ಸಿ. ಸಿ. ಸಭೆಯು ದೋಣಿ ಪಂದ್ಯದಲ್ಲಿ ಮುಗಿಯಿತಂತೆ ಎಂದನ್ನುವುದು ಕುಹಕ.

...ಸಭೆಯೂ ಮುಗಿಯಿತು ; ದೋಣಿ ಪಂದ್ಯವೂ ನಡೆಯಿತು. ಅಷ್ಟೇ !

* * * *

“ ನಮ್ಮ ಪೋಲೀಸರು ತುಂಬಾ ಸಭ್ಯರು ” ಎಂದೊಬ್ಬ ಹೊಗಳಿದ್ದಾನಂತೆ;

—ಅವ, ತಪ್ಪಿಸಿಕೊಂಡು ಹೋದ ಖದೀಮ ಕಳ್ಳನಂತೆ.

* * * *

ಸಪ್ತ ಸಮುದ್ರಗಳನ್ನೂ ಮಿಹಿರ್‌ಸೇನ್‌ರವರು ಈಜಾಯಿತಂತೆ.

—ಆದರೂ ಚುನಾವಣೆಗೆ ನಿಂತರೆ ಹೇಗೋ ?

* * * *

ಈ ಬಾರಿಯ ಚುನಾವಣೆಗೆ ಹಲವಾರು ವಿಶ್ರಾಂತ ಹಿರಿಯ ಅಧಿಕಾರಿಗಳು ಅಭ್ಯರ್ಥಿಗಳಾಗಿದ್ದಾರಂತೆ.

—ಅಂದರೆ ಹಿರಿಯ ಅಧಿಕಾರಿಗಳ ಸಂಪಾದನೆಗಿಂತ, ರಾಜಕೀಯದಲ್ಲಿ ಹೆಚ್ಚು ಸಂಪಾದನೆ ಎನ್ನುವುದು ಖಚಿತವಾಯಿತು.

* * * *

ಪುನರ್ಜನ್ಮದ ಸಿದ್ಧಾಂತವು ಈಗ ಶಾಸ್ತ್ರೀಯ ಸಾಕ್ಷ್ಯಗಳಿಂದ ಒಪ್ಪಲ್ಪಟ್ಟಿದೆಯಂತೆ.

—ಬಿಡಿ ಹಾಗಾದರೆ ! ಮುಂದಿನ ಜನ್ಮದಲ್ಲಾದರೂ ಕಟ್ಲ್ಯಾ ಕಾಯಂದೆ ಒಪ್ಪತ್ತು ಊಟ ದೊರಕಬಹುದು, ಎಂಬ ಆಸೆ ಇಟ್ಟುಕೊಳ್ಳಬಹುದು.

* * * *

ಆಕಾಶವಾಣಿಯ ಶಾಸ್ತ್ರೀಯ ಸಂಗೀತದ ಪಾಠಗಳನ್ನು ಪಾಕಿಸ್ಥಾನೀಯರು ಮೆಚ್ಚಿಕೊಂಡಿದ್ದಾರಂತೆ.

—ಅದೇ ರೀತಿ ಶಾಂತಿ ಪಾಠಗಳನ್ನೂ ಮೆಚ್ಚಿಕೊಳ್ಳಬಾರದೇ ?

* * * *

ವನ್ಯಪ್ರಾಣಿ ಸಪ್ತಾಹವನ್ನು ಮೈಸೂರಿನಲ್ಲಿ ಆಚರಿಸಲಾಗುತ್ತದೆ. ರಾಜಕೀಯ ನಾಯಕರು, ಹಲವರು, ಭಾಗವಹಿಸುತ್ತಾರೆ.

ಪತ್ರಿಕೆಯ ಪಕ್ಕಪಕ್ಕದ ಶೀರ್ಷಿಕೆಗಳು

—ಬೇರೆ ತರಹ ಹೇಳಬಹುದಿತ್ತು.

* * * *

ಮುಂದಿನ ವರ್ಷ ಕಾಫಿ ಬೆಲೆ ಇಳಿಯುತ್ತದೆ.

(ಪತ್ರಿಕೆ)

—ಆದರೆ ಹಾಲು ಮತ್ತು ನೀರಿನ ಬೆಲೆ ಏರುತ್ತಲ್ಲ !!

* * * *

ಸಂಸ್ಥೆಯ ಸಮಾರಂಭದಲ್ಲಿ ಭಾಷಣಕಾರರಿಗೆ, ವ್ಯವಸ್ಥಾಪಕರು ಹೂವಿನಹಾರದ ಬದಲು " ಪ್ರಹಾರ "ವನ್ನು ಒಪ್ಪಿಸಿದರಂತೆ,

—" ಪ್ರಹಾರ " ಪುಸ್ತಕ ಒಂದರ ಹೆಸರು.

* * * *

ಬೆಂಗಳೂರಿನ ಹೊಸ ನವ ನೂತನ ಆಧುನಿಕ ಸಿನಿಮಾ ಮಂದಿರದಲ್ಲಿ ಹೋಟಲು ಆಸ್ಪತ್ರೆ, ಮಕ್ಕಳ ಮಂದಿರ, ನೃತ್ಯಮಂದಿರ ಮತ್ತು ಅಂಗಡಿಗಳು ಇವೆಯಂತೆ.

—ಒಂದು ಭಾಗದಲ್ಲಿ ಸಿನಿಮಾವನ್ನೂ ತೋರಿಸುತ್ತಾರಂತೆ,

* * * *

ಎಪ್ಪತ್ತು ವಯಸ್ಸಾಗಿದೆ. ನಿಮ್ಮ ಪತ್ರಿಕೆಗೆ ಲೇಖನ ಬರೆಯಲು ಆಸೆ, ಮುಪ್ಪಿನ ವಯಸ್ಸಾಗಿದೆಯೋ ಶುರುಮಾಡಲು ಎಂದೊಬ್ಬರು ಕೇಳಿದ್ದಾರೆ.

—ಮುಪ್ಪಿನ ವಯಸ್ಸಲ್ಲ ಸ್ವಾಮಿ, ಇನ್ನೂ ಹುಡುಗ ವಯಸ್ಸು. ಸ್ವಲ್ಪ ವರ್ಷವಾದರೆ ಪಕ್ವವಾಗಬಹುದು,

* * * *

ಇನ್ನು ಮೇಲೆ ನಮ್ಮ ರಾಜಧಾನಿಯಲ್ಲಿ ಟೆಲಿಫೋನಿನವರು ಕನ್ನಡದಲ್ಲಿ ಗಂಟೆ ಎಷ್ಟು ಎಂದು ಕೇಳಿದರೆ ಕನ್ನಡದಲ್ಲೇ ಹೊತ್ತನ್ನು ತಿಳಿಸುತ್ತಾರಂತೆ.

—ಗಂಟೆ ಎಷ್ಟು ಅಂದಾಗ ಏಳೋ ಹೊನ್ನೊಂದೊ ಅಂತ ಅಲ್ಲಿರುವ ಮಲಯಾಳಿ ಹುಡುಗಿಯರು ಅನ್ನಬಹುದು.

ಐದು ವರ್ಷಗಳ ಮುಂಚಿನ ಮಾತು

ಒಂದು ದಿನ ಏಕಾಏಕೀ ನಮ್ಮ ಕಗ್ಗಪ್ಪ ಓಡತಾ ಬಂದು "ಗೊತ್ತಾಯ್ತು, ಕೊನೇಗೆ ನಾಯಿಲೆಕ್‌ಶನ್‌ಗೆ ನಿಲ್ತೀನಿ" ಅಂದ!

"ಎಲ್ಲಿ ನಿಲ್ತಿ?" ಎಂದರು ನಂ ಪೈಕಿ ಒಬ್ಬರು.

"ಇಲೆಕ್‌ಶನ್‌ಗೆ".

ಎದುರು ನೋಡಿದಿವಿ, ಸೂರ್ಯ ಪಶ್ಚಿಮದಲ್ಲಿಯೇ ಮುಳುಗ್ತಿದ್ದ. ಆದರೂ ಇದು ಹೀಗೆ ಯಾಕಾಯ್ತು—ಅಂತ ನಮಗೆಲ್ಲ ದಿಗಿಲು, ಆದರೂ ಮುಂಚೆ ೮-೧೦ ದಿನ ಕಗ್ಗಪ್ಪ ಬೆಂಗಳೂರಿಗೆ ಹೋಗಿದ್ದ. ಅಲ್ಲಿ ಕ್ಯೂನಲ್ಲಿ ನಿಂತು ನಿಂತು ಅಭ್ಯಾಸ ಆಗಿದೆ ಏನೊ, ಅದಕ್ಕೇ ಈಗ ನಿಲ್ತೀನಿ ಅಂತಾನೇನೊ ಅಂತ ನಮಗೆ ಸಂಶಯ. ಯಾಕಂದ್ರೆ, ಹುಡುಗ ಇದ್ದಾಗಿನಿಂದಲೂ ನಮಗೊತ್ತು ಕಗ್ಗಪ್ಪ. ಬಹಳೇ ಒಳ್ಳೆಯವ. ಮೂವತ್ತು ವರ್ಷ ಕೂಡಿ ಬೆಳೆದಿವಿ ನಾವು, ಯಾವುದೂ ಬೇಜಾರ ಗೊಳ್ಳದೆ ಒಂದೇ ಸಮನೆ ಮೂವತ್ತು ವರ್ಷ ಒಳ್ಳೆಯವನೆ ಆಗಿ ಉಳಿದ ಕಗ್ಗಪ್ಪನಿಗೆ ಈಗ ಏನಾಯ್ತು?

"ನಿಲ್ಲೋವಾಗ ನಿಂತೀಯಂತೆ. ಈಗ ಕೂತುಕೋ. ಬೆವರೊರೆಸಿಕೊ. ಆಮ್ಯಾಲೆ ನಿಧಾನವಾಗಿ ಹೇಳು. ಅಗತ್ಯ ಅನ್ನಿಸಿದರೆ ಡಾಕ್ಟರ ಕಡೆ ನಿನ್ನ ತೋರಿಸಿ ಕೊಂಡು ಬರೋಣ" ಎಂದ ಇನ್ನೊಬ್ಬ ಗೆಳೆಯ.

ಚುನಾವಣೆ ಅಂದ್ರೆ ಬೇಕಾದವರು ನಿಲ್ಲಬಹುದು ಅನ್ನೋದು ನಮಗೂ ಗೊತ್ತು. ಆದರೆ ನಮಗೆ ಬೇಕಾದವನಾದ ಕಗ್ಗಪ್ಪ ನಿಲ್ಲೋದಂದ್ರೆ? ಅವನ ಕಾಲ-ಮಹಿಮೆ ಅನ್ನೋಣವೇ? ಅಮಾವಾಸ್ಯೆಗಾಗಲಿ ಹುಣ್ಣಿಮೆಗಾಗಲಿ ಮರುಕಳಿಸುವ ರೋಗ ಇವೆ ಅಂತ ಡಾಕ್ಟರು ಹೇಳ್ತಾರೆ. ಆದರೆ ಅಯ್ದು ವರ್ಷಗಳಿಗೊಮ್ಮೆ ಮರುಕಳಿಸುವ ರೋಗ ಕಗ್ಗಪ್ಪನಿಗಿದೆಯೆ? ಅದಕ್ಕೆ ಡಾಕ್ಟರಿಗೆ ತೋರಿಸೋಣ ಅನ್ನೋ ವಿಚಾರ ನಮಗೆ ಬಂದದ್ದು.

"ಅಲ್ಲೊ, ನಿನಗೆ ಯಾರು ಹೇಳಿದರು ನಿನ್ನಲ್ಲಿ ಇಂಥಾದ್ದು ಇದೆ ಅಂತ?" ಎಂದು ನಾನೂ ಕೇಳಿದೆ.

ಇನ್ನು ಮುಂದೆ ಈ ಕತೆ ಹೇಳೋ ಮುಂಚಿತ ನಿಮಗೆ ಕಗ್ಗಪ್ಪನ ವಿಷಯ ಹೇಳಲೇಬೇಕು, ಇಲ್ಲದಿದ್ದರೆ ಇಂಥಾ ಮಾತಿಗೆ ನಾವು ಇಷ್ಟು ಯಾಕೆ ಯೋಚನೆಗೊಳಗಾದಿವಿ ಅನ್ನೋದರ ಅರ್ಥ ಇಲ್ಲವೆ ಮಹತ್ವ ನಿಮಗೆ ಹೊಳೆಯಲಿಕ್ಕಿಲ್ಲ.

ಕಗ್ಗಪ್ಪ ನಮ್ಮೆಲ್ಲರ ಕೂಡ ಬೆಳೆದವನು ಅಂತ ಹೇಳಿದೆನಲ್ಲ? ಆದರೆ ಹೇಗೆ ಬೆಳೆದ ಅನ್ನೋದು ಗೊತ್ತೆ ನಿಮಗೆ?

ಹುಟ್ಟಿನಂದಿನಿಂದ ಗಾಂಧಿ ತತ್ವಗಳನ್ನು ಮೈಗೂಡಿಸಿಕೊಂಡೇ ಬೆಳೆದ. ಅವನಿಗೆ ತನ್ನದು ಅನ್ನೋದು ಯಾವುವೂ ಇಷ್ಟ ಇರಲಿಲ್ಲ, ಆದರೆ "ಇನ್ನೊಬ್ಬರದು" ಅನ್ನೋ ಮಾತನ್ನು ಅವನ ತಾಯಿ ಅವನಿಗೆ ಚೆನ್ನಾಗಿ ತಿಳಿಸಿಕೊಟ್ಟಿದ್ದಳು.

ಒಂದು ದಿನ ಹಣ್ಣು ತಿನ್ನುತ್ತಿದ್ದ.

" ಯಾರದು ? ಎಂದಳು ತಾಯಿ

"ಅ-ಅವ್-ವೊ—" ಎಂದು ಬಾಯ್‌ತುಂಬ ಹಣ್ಣನ್ನು ಕಡಿಯುತ್ತಿದ್ದುದಕ್ಕಾಗಿ ಕೈಮಾಡಿ ದೂರ ತೋರಿಸಿದ.

"ನಿನಗೆ ಕೊಟ್ಟರೆ ?" ಎಂದು ಕೇಳಿದಳು, ಅಮ್ಮ.

ಜೇನ್ನೊಣಗಳು ಮುತ್ತಿ ಕಚ್ಚಿದಾಗ ಉಬ್ಬಿದಂತೆ ಬಾಯಿ ಗಲ್ಲಗಳು ಉಬ್ಬಿದ್ದಕ್ಕೆ "ಇಲ್ಲ" ಎಂದು ತಲೆಯನ್ನಲ್ಲಾಡಿಸಿದ.

"ಇನ್ನೊಬ್ಬರದನ್ನ ಅವರಿಗೆ ಕೇಳದೆಯೆ, ಅವರಾಗಿ ಕೊಡದೆಯೆ ಎಂದಿಗೂ ತಕ್ಕೋಬಾರದು" ಎಂದಳು ಅಮ್ಮ.

ಬಾಯಿ ಖಾಲಿಯಾದುದಕ್ಕೆ ನಾಲಗೆಯನ್ನು ತುಟಿಗಳಮೇಲೆ ಆಡಿಸುತ್ತ ತಲೆಯನ್ನು ತೂಗಿದ್ದ.

ಅಂದಿನಿಂದ ಕಗ್ಗಪ್ಪನಿಗೆ ಹಣ್ಣುಗಳ ಕೊರತೆಯೆ ಇರಲಿಲ್ಲ. ಎಷ್ಟು ಪ್ರಯತ್ನ ಮಾಡಿದರೂ ಇವನು ಹೋದಾಗ ಹಣ್ಣುಗಳ ಒಡೆಯರು ಇರುತ್ತಿರಲೇ ಇಲ್ಲ.

ಇನ್ನೊಂದು ದಿನ ಇವನ ಜೇಬುಗಳಲ್ಲಿ ೫–೬ ಹಣ್ಣುಗಳಿದ್ದುದನ್ನು ಕಂಡು "ಅಷ್ಟೆಲ್ಲಾ ತಿನ್ನಬಾರದು, ಹೊಟ್ಟೆಗೆ ಒಳ್ಳೇದಲ್ಲ" ಎಂದು ಅಮ್ಮ ಉಪದೇಶ ಮಾಡಿದಳು.

"ಅಷ್ಟು ನನಗೆ ಬೇಡವೇ ಬೇಡ" ಎಂದ ಕಗ್ಗ.

"ಹಾಗಾದರೆ ಅಷ್ಟು ಯಾಕೆ ತಂದೆ ?"

"ಎರಡೂ ಕೈತುಂಬಿಕೊಂಡು ಅವಸರ—"

"ಅವರಿಗೇನೊ ತಮ್ಮ ವ್ಯಾಪಾರದ ಅವಸರ, ಎರಡೂ ಕೈತುಂಬಿ ಹಿಡಿ. ಎಂದಿರಬೇಕು, ಆದರೂ ನೀನು ತಕ್ಕೊಳ್ಳಬಾರದು, ಮಗೂ. ತನಗೆ ಎಷ್ಟು ಬೇಕೊ ಷ್ಟು ಸಾಕು ಅನ್ನಬೇಕು. ಹೆಚ್ಚಿನ ಆಸೆ ಮಾಡಿದರೆ ದೇವರು ಕೋಪಿಸಿಕೊಳ್ತಾನೆ" ಂದು ತಾಯಿ ಹೇಳಿದಳು.

ಕಗ್ಗನಿಗೆ ಆ ಮಾತು ಬಹಳೇ ಒಪ್ಪಿಗೆಯಾಯಿತೇನೊ ! ಯಾಕೆಂದರೆ, ಒಮ್ಮೆ ನಾವೆಲ್ಲರೂ ಹುಡುಗರು ಬೀದಿಗುಂಟ ಹೊರಟಾಗ ಒಂದು ಕಾಂಪೌಂಡಿನಲ್ಲಿ ೩–೪ ಹುಣಿಸೇಮರಗಳು ಕಾಯಿ ತುಂಬಿ ತೂಗುತ್ತಿದ್ದುವು,

ಮರವನ್ನು ಹತ್ತೋಣ ಕಗ್ಗ.

"ಅದು ಇನ್ನೊಬ್ಬರ ಮನೇವಳಗಿನ್ದು—"

"ಇದ್ದರೇನಾಯ್ತು ? ತನಗೆ ಎಷ್ಟುಬೇಕೊ ಅಷ್ಟೆಸಾಕು ಅನ್ನಬೇಕು ಅಂತ ಅಮ್ಮ ಹೇಳಿದ್ದಳಲ್ಲ ? ಈ ಮನುಷ್ಯನಿಗೆ ಇಷ್ಟು ಮರಗಳೊಳಗಿನ ಇಷ್ಟು ಕಾಯಿ ಯಾಕೆ ?"

ನಮ್ಮೆಲ್ಲರಿಗೂ ಒಪ್ಪಿಗೆಯಾಯಿತು. ನಮ್ಮೆಲ್ಲರಿಗೂ ಕಗ್ಗನೇ ಲೀಡರ್ ಯಾರಾರಿಗೆ ಯಾವಾವುದು ಅವರಿಗೆ ಬೇಕಿದ್ದುದಕಿಂತ ಹೆಚ್ಚು ಇದೆ ಎಂದು ಅವನು ನಿರ್ಣಯಿಸುವನೊ ಅಲ್ಲಿ ಅಂತಹವನ ಮೇಲೆ ದೇವರು ಕೋಪಿಸಿಕೊಳ್ಳಬಾರದು ಎಂಬ ನಮ್ಮ ಸದಿಚ್ಛೆಯನ್ನು ಕಾರ್ಯರೂಪಕ್ಕಿಳಿಸುತ್ತಿದ್ದೆವು. ಕಗ್ಗ ನಮ್ಮ ಲೀಡರ್ ಎಂಬುದನ್ನೆ ನಾವು ಕೂಡ ಯೋಗ್ಯರೀತಿಯಲ್ಲಿ ಒಪ್ಪಿಕೊಂಡಿದ್ದೆವು. ನಮಗಾಗಿ ಅವನು ಏನನ್ನೆ ಮಾಡಲಿ, ನಾವು ಅವನಿಗೆ ಅಲ್ಪಕಾಣಿಕೆಯ ರೂಪದಲ್ಲಿ ಗೌರವವನ್ನು ಸಲ್ಲಿಸುತ್ತಿದ್ದೆವು. "ನಮಗಾಗಿ" ಎಂದೆನಲ್ಲ ? ಅದಕ್ಕೊಂದು ಕಾರಣವಿದೆ. ಕ್ರಮೇಣ ಕಗ್ಗ ತನಗಾಗಿ ಒಂದು ಹಣ್ಣನ್ನೂ ತರುತ್ತಿರಲಿಲ್ಲ, ಒಂದು ಮರವನ್ನೂ ಏರುತ್ತಿರಲಿಲ್ಲ. ಹೇಳಿದೆನಲ್ಲ "ತನ್ನದು" ಎಂಬ ಆಸೆ ಬರುವತನಕ ಅವನಲ್ಲಿರಲಿಲ್ಲ ಎಂದು ? ನಮ್ಮಿಂದಾದರೂ ಕಾಣಿಕೆಯನ್ನು ಅವನು ಸ್ವೀಕರಿಸುತ್ತಿದ್ದುದು ಯಾಕೆ ? ನಮ್ಮಲ್ಲಿ ಜವಾಬ್ದಾರಿಕೆ ಬೆಳೆಯಲಿ ಎಂದು. ಇಲ್ಲವಾದರೆ ಬೇಕಾದಾಗ ನಾವು ಬೇಕಾದನ್ನು ಬಯಸಿ ಬೇಡುವ ಸಂಭವವಿದ್ದಿತು, ಅಂತೂ ಕಾಣಿಕೆ ಇಲ್ಲದೆ ಯಾರಿಗಾಗಿ ಏನನ್ನು ಮಾಡುವುದೂ ತಪ್ಪು ಎಂಬ ಪಾಠವನ್ನು ಅವನು ನಮಗೂ ಕಲಿಸಿದ, ತಾನೂ ಕಲಿತುಕೊಂಡ

ಇದೆಲ್ಲವನ್ನು ನೆನೆದುಕೊಂಡೇ ನಾನು ಮೊದಲೇ ಹೇಳಿದೆ- ಕಗ್ಗ ಹುಟ್ಟಿನಿಂದಲೂ ಒಳ್ಳೆಯವ— ಎಂದು.

"ಅಲ್ರೊ, ಕಗ್ಗಾ, ನಿನಗೆ ಯಾಕೆ ಈ ಪೀಡೆ ತಗಲಿಕೊಂಡಿತೋ ? ನಿಮ್ಮ ಅಮ್ಮ ಎಂಥೆಂಥ ಒಳ್ಳೆತನ ನಿನಗೆ ಕಲಿಸಿದ್ದಳು—"

ಕಗ್ಗ ಒಮ್ಮೆಲೆ ಚಪ್ಪಾಳೆ ತಟ್ಟಿದ.

"ಅದೇ ! ಅದೇ ! ಅದೇ ನೋಡು ! " ಎಂದು ಉತ್ಸಾಹದಿಂದ ಕೂಗಿದ.

"ಯಾವುದನ್ನ ? ಎಲ್ಲಿ ? "

"ನೀವು ಹೇಳಿದಿರಲ್ಲ ಅಮ್ಮ ಒಳ್ಳೆತನ ಕಲಿಸಿದಳು ಅಂತ ? ಅದನ್ನೆ ಅವರೂ ಹೇಳಿದರು. ನಾನು ಸರಿಯಾದ ಕ್ಯಾಂಡಿಡೇಟ್ ಆಗ್ತೀನಿ ಅಂತ. "

ಅದೇನೋ ಹೇಳ್ತಾರಲ್ಲ. ಅಮ್ಮ ಅಡಿಗೆ ಕಲಿಸಿದಳು—ಅಂತ ಏನೇನೋ. ಇದೂ ಅಂಥಾದ್ದರ ಪೈಕೀನೇ ಅಂದ್ಕೊಂಡು ನಾವು ಸುಮ್ಮನಾದೆವು.

—ಶ್ರೀರಂಗ

[ಅತ್ತೆ ಕಲಿಸೋದನ್ನ ಎಲೆಕ್ಷನ್ ಕಲಿಸುತ್ತೆ.]

ಸಂ.

★ ಮುಗಿಲು ಹಳ್ಳಿಯಲ್ಲಿ ಕನ್ನಡ ಚಳುವಳಿ ★

★ ಲೇಖಕ : ಅ. ರಾ. ಸೇ.

ಕಡೇ ರಾತ್ರಿ :

ಮುಗಿಲು ಹಳ್ಳಿ ಕನ್ನಡದ ಸುಭದ್ರ ಕೋಟೆ. ಅಲ್ಲಿ ಎಂತಹ ಕನ್ನಡ ಚಳುವಳಿ? ಏಕೆ ? (ಲಂಡನ್ನಿನಲ್ಲಿ ಇಂಗ್ಲಿಷ್ ಚಳುವಳಿಯೇ ?) ದುರದೃಷ್ಟವಶಾತ್ ಅಲ್ಲಿ ಕನ್ನಡಕ್ಕೆ ಗಂಡಾಂತರವೊದಗಿದೆ. ಸುತ್ತಮುತ್ತಲೂ ಛಾನಲ್ ಏರಿಯಾ ಬಂದು ಅಲ್ಲಿ ತಮಿಳರು, ತೆಲುಗರು ಮೊದಲಾದವರೆಲ್ಲಾ ತುಂಬಿಕೊಳ್ಳುತ್ತಲಿದ್ದಾರೆ.

ಅಷ್ಟೇ ಅಲ್ಲ ಕನ್ನಡಕ್ಕೊಂದು ಚಳುವಳಿಯ ಅಗತ್ಯ ಯಾವಾಗಲೂ ಇದೆ. ಟೆಕ್ಸ್ಟ್ ಬುಕ್ಕುಗಳು, ಹೊಸ ಕವಿಗಳು, ನಾಟಕಕಾರರು, ಮುನಿಸಿಪಾಲಿಟಿಯವರು, ಬೋರ್ಡ್ ಬರೆಯುವವರು ಮತ್ತು ಸ್ವತಃ ಕನ್ನಡಿಗರಿಂದ ಕನ್ನಡಕ್ಕೆ ಎಂದೂ ಗಂಡಾಂತರ ತಪ್ಪಿದ್ದಲ್ಲ.

ಸುಮಾರು ಹನ್ನೆರಡನೆಯ ಶತಮಾನದಲ್ಲಿ ಜೀವಿಸಿದ್ದ ಕವಿಕುಲ ತಿಲಕನೆನ್ನಿಸಿಕೊಂಡ ಮಹಾಕವಿ ಸಿಂಗಿದೇವನು ಕನ್ನಡದಲ್ಲಿ ಆಗ ಮತ್ತು ಅದರ ಹಿಂದೆ ನಡೆಯುತ್ತಿದ್ದ ಸಾಹಿತ್ಯರಚನೆಯ ವಿರುದ್ಧ ಕ್ರಾಂತಿಯೊಂದನ್ನೆಬ್ಬಿಸಿ ಮನನೊಂದು ಯಾವ ಕಾವ್ಯವನ್ನೂ ಬರೆಯದೆ ಕನ್ನಡಕ್ಕೆ ಮಹದ್ಸೇವೆ ಸಲ್ಲಿಸಿದನು. ಜನ್ನನೂ ತನ್ನ ಚಳುವಳಿಯ ಮುಂಚೂಣಿಯಲ್ಲಿದ್ದವನು. ಅವನು ಅವನ ಸಮಕಾಲೀನ ಕವಿಗಳ ಕಾವ್ಯವನ್ನು ಕೋಪದ ಹಣೆಗಣ್ಣಿನ ಬೆಂಕಿಯಿಂದ ದಹಿಸಿ ಕುಕವಿ ಫಾಳಲೋಚನನೆನ್ನಿಸಿಕೊಂಡನು. ಅದೆಲ್ಲಾ ಗತವೈಭವ.

ಇಂದು ಕನ್ನಡಕ್ಕೆ ಯಾರು ಗತಿ ? ಬೆಂಗಳೂರು, ಮುಂಬಯಿ, ದೆಹಲಿ, ರೂರ್ಕೆಲಾಗಳಲ್ಲಿ ಕನ್ನಡಾಭಿಮಾನಿಗಳು ಕನ್ನಡವನ್ನು ಉಳಿಸುತ್ತಿದ್ದಾರೆ. ಅವರಾರೂ ಮುಗಿಲುಹಳ್ಳಿಯಲ್ಲಿಲ್ಲ. ಚಂದಾಸಾಹೇಬನು ತಿರುಚನಾಪಳ್ಳಿಯ ಕೋಟೆಯನ್ನು ಮುತ್ತುತ್ತಿರುವಾಗ ಕ್ಲೈವನು ಆರ್ಕಾಟನ್ನೇ ವಶಪಡಿಸಿಕೊಂಡಂತೆ ಕನ್ನಡದ ರಾಜಧಾನಿ ಪರಾಕ್ರಾಂತವಾಗಲಿದೆ! ಇದನ್ನು ಯೋಚಿಸಿದ ಶೇಷರಾಜು ಕಂಬನಿಗಳನ್ನು ಕರೆಯುತ್ತಾ ಮೆಣಸಿನಕಾಯಿ ಬೋಂಡಾ ಪೊಟ್ಟಣದಲ್ಲಿದ್ದ ಕೊನೆಯ ಮೆಣಸಿನಕಾಯನ್ನು ಕಡಿದ. ರಾತ್ರಿ ಮುಗಿಯುತ್ತಾ ಬಂದುದರಿಂದ ತನ್ನ ಮಹತ್ಕಾರ್ಯವನ್ನು ಮಾರದಿನಕ್ಕೆ ಮುಂದೂಡಿ ನಿದ್ದೆ ಮಾಡಲು ನಿರ್ಧರಿಸಿದ.

ಮಧ್ಯಾಹ್ನ :

ಶೇಷ ಎದ್ದಾಗ ಹತ್ತೂವರೆ ಗಂಟೆಯಾಗಿತ್ತು. ಅವನ ಹಿರಿಯಣ್ಣ ಅಷ್ಟು ವತ್ತಿಗಾಗಲೇ ಎದ್ದು ಚೆನ್ನಾಗಿ ಮೇಕಪ್ ಮಾಡಿಕೊಂಡು ಜವಾರಿ (ಲೋಕಲ್) ಕ್ಲಾರ್ಕ್ ಗೇಬಲನಂತೆ ಮೀಸೆ ಹುರಿ ಮಾಡುತ್ತಾ ನಿಂತಿದ್ದ.

" ಇವೊತ್ತು ನಾಲ್ಕು ಗಂಟೆಗೆ ಇಂಟರ್ ವ್ಯೂ ಇದೆ. ಕಂಪನಿ ಆಫೀಸಿಗೆ ಬಾ " ಎಂದ ಅಣ್ಣ.

" ನನಗೆ ಆ ಕೆಲಸ ಬೇಡ " ಎಂದ ಶೇಷ.

" ಯಾಕೆ ? ಮೂವತ್ತೆಂಟರವರೆಗೆ ನಿರುದ್ಯೋಗಿಯಾಗಿರಬೇಕೇನು ? "

" ನನಗೆ ನಾನೂರು ರೂಪಾಯಿ ಸಂಬಳಕ್ಕಿಂತ ಕಡ್ಮೆ ದುಡ್ಡು ಬರೋ ಕೆಲ್ಸ ಬೇಡ ".

" ಭಾರಿ ಶೂರ, M.E., D.SC., ಮಾಡಿದ ಇವನ ಮುಖಕ್ಕೆ ನಾನೂರು ಕೊಡುತ್ತಾರೆ. "

" ಇಲ್ಲದಿದ್ರೆ ಬೇಡವೇ ಬೇಡ "

" ಹಾಗಾದ್ರೆ ಏನು ಮಾಡ್ತೀ ? "

" ಕನ್ನಡ ನಾಡು ' ನುಡಿಗಳಿಗಾಗಿ ಹೋರಾಡುತ್ತೇನೆ " ಎಂದವನೇ ಶೇಷ ಉತ್ತರಕ್ಕಾಗಿ ಕಾಯದೆ ಟವಲನ್ನು ಹೆಗಲಮೇಲಕ್ಕೆಸೆದು ಎದ್ದು ಒಳಕ್ಕೆ ಹೋಗಿಬಿಟ್ಟ.

ಅಣ್ಣನ ಕಣ್ಣುಗಳು ನಿದಾನವಾಗಿ ಮುಚ್ಚಿದವು. ತಲೆ ತಿರುಗಿದ ಹಾಗಾಯಿತು. ಹಾಗೇ ನೆಲದಮೇಲೆ ಕುಸಿದುಬಿದ್ದ.

ಶೇಷ ಕಾಫಿ ಕುಡಿದು ಸ್ನಾನ ಮುಗಿಸಿ ಕೋಣೆಗೆ ಬಂದಾಗ. ಅಣ್ಣ " ಅಯ್ಯೋ ದುರ್ದೈವೀ ಕನ್ನಡವೇ " ಎಂದು ಕನವರಿಸಿ ಮೇಲಕ್ಕೆದ್ದು ಆಫೀಸಿಗೆ ಹೊರಟ.

ಮೇಕಪ್ :

ಶೇಷ " ಜೈ ಕನ್ನಡಾಂಬೆ " ಎನ್ನುತ್ತಾ ಸುಗಂಧಿತ ಹೇರಾಯಿಲ್ ಸೀಸೆಯ ಮುಚ್ಚಳ ತೆಗೆದ. ಕನ್ನಡ ಬಾಳ್ಗೆ ಎಂದು ಎಣ್ಣೆಯನ್ನು ಕೂದಲಿಗೆ ಹಚ್ಚಿದ. "ಕನ್ನಡದ ಮನೆಯಲ್ಲಿ ಕನ್ನಡಿತಿ ಯಜಮಾನಿ " ಎಂಬ ಆತ್ಮ ವಿಶ್ವಾಸದಿಂದ ತಲೆ ಬಾಚಿಕೊಂಡ. " ಸೊಗಯಿಸಿ ಬಂದ ಮಾಮರನೆ ತಳ್ತಿಲೆವಳ್ಳಿಯ ಪೂತಜಾತಿ ಸಂಪಿಗೆಯೇ " ಎನ್ನುತ ಮುಖಕ್ಕೆ ಪೌಡರ್ ಹಚ್ಚಿದ. " ಕನ್ನಡ ಎರಡರು ನೂರರ ಕನ್ನಡು " ಎನ್ನುತ್ತಾ ಟೆರಿಲೀನ್ ಷರ್ಟ್ ಹಾಕಿಕೊಂಡ. " ಕನ್ನಡಾ ಕನ್ನಡಾ " ಎನ್ನುತ್ತಾ ವುಲನ್ ಪ್ಯಾಂಟ್ ಏರಿಸಿದ. " ಕನ್ನಡಕ್ಕೆ ಬಂತು ಕೇಡು " ಎಂದು ಪ್ಯಾಂಟಿನ ಮೇಲೆ ಹತ್ತಿದ್ದ ಧೂಳನ್ನು ಕೊಡವಿದ.

ಕರುನಾಡ ಕುವರನ್
ಮರೆವೊಮ್ಮೆ ಬೆದರನ್ !

ಎಂದು ಅರಚುತ್ತಾ ನಾಲು ಕಟ್ಟಿದ ಟ್ರಯಾಂಗಲ್ ಬೂಟುಗಳನ್ನು ಕೈಯಲ್ಲಿ ಹಿಡಿದು " ರಕ್ಷಿಸು ಕನ್ನಡ ಮಾತೆ, ನೀನೇಕೆಮ್ಮನು ಮರೆತೆ " ಎಂದು ಅವನ್ನು ಕಾಲಲ್ಲಿ ಹಾಕಿಕೊಂಡ. ಅಲ್ಲಿಗೆ ಉಳಿದ ಘೋಷಣೆಗಳು ನೆನಪಿಗೆ ಬರದಹಾಗಾಗಿ ಮೌನವಾದಿಯೇ ನೇಲ್ ಪಾಲಿಷ್ ಹಚ್ಚಿಕೊಂಡ.

" ಓ ಜಾನೆ ವಾಲೇ " ಎಂದು ಆರಂಭಿಸಿದವನು ನಡುವಿಗೇ ನಿಲ್ಲಿಸಿ " ಬಾ ಬಾ ಬಾರೇ ನನ್ನವಳೇ " ಎನ್ನುತ್ತಾ ಕನ್ನಡಿಯ ಮುಂದೆ ನಿಂತು ಏರುಪೇರುಗಳನ್ನೆಲ್ಲಾ ನೇವರಿಸಿ ಸರಿಪಡಿಸಿ ಹಿಗ್ಗಿದ. ಕೆದರುಗೂದಲಿನ, ಕೃಶಕಾಯದ ಗಡ್ಡದ ಸಾಹಿತಿಗ ಳಾಗಲೀ, ಅಧಿಕಾರ ಯಾವಾಗ ಹೋಗುವುದೋ ಎನ್ನುವ ಹೆದರಿಕೆಯಿಂದ ತತ್ತರಿಸು ತ್ತಿರುವ ಒರಟು ಬಟ್ಟೆಯ ರಾಜಕಾರಣಿಗಳಾಗಲೀ ಕನ್ನಡವನ್ನು ಉದ್ಧರಿಸಲು ಸಾಧ್ಯ ವಿಲ್ಲ. ಅದಕ್ಕೆ ನಯನ ಮನೋಹರ ರೂಪಿನ, ಅತ್ಯುತ್ತಮವಾಗಿ ಅತ್ಯಾಧುನಿಕ ಉಡುಪು ಧರಿಸಿದವನೇ ತಕ್ಕವನು ಎಂಬುದು ಶೇಷನ ಅಭಿಪ್ರಾಯ.

Great minds think alike ! ಪಂಪನನ್ನೇ ನೋಡಿ. ಅವನು ಕೆದರುಗೂದಲು, ಹಸಿದ ಹೊಟ್ಟೆ, ಕುಗೆಟ್ಟ ಮುಖಗಳಲ್ಲಿ ನಂಬಿಕೆ ಇಟ್ಟಿರಲಿಲ್ಲ. ಕವಿಯೂ ಕಲಿಯೂ ಆ ಸವ್ಯಸಾಚಿ ತನ್ನನ್ನು "ಧಾತ್ರೀವಳಯ ನಿಳಿಂಪ, ಪಂಚ ಶರೈಕ ರೂಪಂ" ಎಂದು ವರ್ಣಿಸಿಕೊಂಡಿದ್ದಾನೆ.

ಉದ್ಧಾರಕ್ಕೊಂದು ಯೋಜನೆ :

ಕನ್ನಡ ಉದ್ಧಾರವಾಗುವುದು ಹೇಗೆ ಎಂದು ಶೇಷ ಮತ್ತೆ ಆಲೋಚಿಸಲಾರಂ ಭಿಸಿದ. ಯಾರಿಗೂ ಅರ್ಥವಾಗದ ಕಾವ್ಯಗಳನ್ನು ಬರೆಯುವ ಕವಿಗಳು ಜನತೆಯನ್ನು ಆಕರ್ಷಿಸುವುದಿಲ್ಲ. ಕನ್ನಡ ನಾಡಿನಲ್ಲಿಯೇ ಕನ್ನಡ ಚಳುವಳಿಯೆಬ್ಬಿಸಬೇಕಾದ ಅಗತ್ಯ ವನ್ನುಂಟುಮಾಡಿದ ರಾಜಕಾರಣಿಗಳು ? ರಾಜಕಾರಣದ ತಂಟೆಯೇ ಬೇಡ.

ಮುಗಿಲುಹಳ್ಳಿಯ ಆರು ಚಿತ್ರಮಂದಿರಗಳಲ್ಲೂ ಕನ್ನಡ ಚಿತ್ರಗಳೇ ಪ್ರದರ್ಶನ ಭಾಗ್ಯ ಪಡೆದಿರುವುದರಿಂದ ಮತ್ತೆ ಕನ್ನಡ ಸಿನಿಮಾ ಚಳುವಳಿಯೆಬ್ಬಿಸುವುದು ನಿಷ್ಫ ಯೋಜಕ.

ಚಳುವಳಿ ಜನತೆಯ ಸ್ವತ್ತಾಗಿರಬೇಕು. ಅವರ ಕುತೂಹಲ ಕೆರಳಿಸುವಂತಿರ ಬೇಕು. ಆದರೆ ಸದ್ಯದಲ್ಲಿ ಜನತೆಗೆ ಅನ್ನ, ವಸ್ತ್ರಗಳ ಅಭಾವದಿಂದಾಗಿ ವಾಯು ಭಕ್ಷಣೆಯೇ ಗತಿಯಾಗಿರಬೇಕಾದರೆ ಕುತೂಹಲ ಕೆರಳುವುದೆಂತು. ಆದುದರಿಂದ ದೊಡ್ಡ ಸಭೆಯೊಂದನ್ನೇರ್ಪಡಿಸಿ ಬಿಟ್ಟು ನಾಟಕವನ್ನೇರ್ಪಡಿಸಿದರೆ ಜನ ಜಮಾಯಿಸಬಹುದು. ಹಾಗೆ ಜಮಾಯಿಸಿದ ಜನ ನಡುವಿನಲ್ಲೇ ಹೋಗದಿರಬೇಕಾದರೆ ಸಿನಿಮಾ ನಟಿಯೊ ಬ್ಬಳು ಆಹ್ವಾನಿತಳಾಗಿರಬೇಕು. ಸಭೆಯಲ್ಲಿ ದೊಂಬಿಯಾಗದಿರಬೇಕಾದರೆ ಪೋಲೀಸರ ಸಹಕಾರವಿರಬೇಕು. ಸಭೆಯ ಖರ್ಚಿಗೆ ? ಕೈಯಿಂದ ತೆರಬೇಕೇ ? ಸ್ಥಳೀಯ ಧನಿಕರ ಕೊರಳಿಗೆ ಗಂಟು ಬೀಳಬೇಕೇ ? ಕೈಯಿಂದ ತೆರಬೇಕಾದರೆ ದುಡಿಯಬೇಕು. ಕೈಖರ್ಚಿಗೆ ಆಗಿ ಉಳಿಯಬೇಕಾದರೆ ಕೊನೆಯಪಕ್ಷ ನಾನೂರು ರೂಪಾಯಿ ಸಂಬಳ ಉಳಿಯಬೇಕು. ಮುಗಿಲು ಹಳ್ಳಿಯಲ್ಲಿ ಅಬ್ಬಬ್ಬಾ ಎಂದರೆ ಎಂಭತ್ತು ರೂಪಾಯಿ ಸಂಬಳ ಸಿಕ್ಕಬಹುದು ಹೊಟ್ಟೆಯ ಪಾಡಿಗೆ ದುಡಿಯಲಾರಂಭಿಸಿದರೆ ಚಳುವಳಿ ?

ಕನ್ನಡವೀರ :

ಶೇಷ ಮನೆಯಿಂದ ಹೊರಟು ಸರ್ಕಲ್ ರೆಸ್ಟೋರೆಂಟಿನಲ್ಲಿ ತಿಂಡಿ ಕಾಫಿ ಮುಗಿಸಿ ನೂರು ದೊಂಬಿ ರಸ್ತೆಗೆ ಕಾಲಿಟ್ಟಾಗ "ಕರ್ಣಪಿಶಾಚಿ" ಪತ್ರಿಕೆಯ ಮಧ್ಯಾಹ್ನದ ಮುದ್ರಣ ಆಗಲೇ ಹೊರಬಿದ್ದಿತ್ತು. "ಬಿಸಿ ಬಿಸೀ ಸುದ್ದಿ" ಭಾರಿ ಅಪಘಾತ" ಎಂದು ಪತ್ರಿಕೆಯ ಹುಡುಗರು ಕೂಗುತ್ತಿದ್ದರು. ಶೇಷ ಒಂದು ಪತ್ರಿಕೆಯನ್ನು ಕೊಂಡುಕೊಂಡ,

"ನೂರುದೊಂಬೀ ರಸ್ತೆಯಲ್ಲಿ ಭಾರೀ ಅಪಘಾತ" ಎಂದು ಆರಂಭವಾಗಿದ್ದ ಸುದ್ದಿ ಹೀಗಿತ್ತು,

"ಈ ದಿನ ಬೆಳಿಗ್ಗೆ ಹತ್ತು ಮುಕ್ಕಾಲು ಘಂಟೆಗೆ ಈ ಊರಿನ ವೀರಣ್ಣ ಎಂಬ ಯುವಕನು ನೂರುದೊಂಬಿ ರಸ್ತೆಯಲ್ಲಿ ಸ್ಕೂಟರನ್ನು ಬಿಟ್ಟುಕೊಂಡು ಬರುತ್ತಿರು ವಾಗ ಕಣ್ಣು ಪಿಳ್ಳೈ ಮತ್ತು ವೀರಭದ್ರುಡು ಎಂಬ ಪರಸ್ಥಳದವರು ಜಗಳವಾಡುತ್ತಾ ನಡುರಸ್ತೆಗೆ ನುಗ್ಗಿದರೆಂದೂ, ವೀರಣ್ಣನವರು ಹಾರನ್ನು ಮಾಡುತ್ತಿದ್ದರೂ ಕೇಳಿಸಲಿಲ್ಲ ವೆಂದೂ, ಅವರಿಬ್ಬರೂ ಛಾನಲ್ ಜಮಿನಾನು ಕೊಂಡುಕೊಂಡ ಹೊಸಬರೆಂದೂ ಅವರಿ ಬ್ಬರ ಕಾಲೂ ಮುರಿಯಿತೆಂದೂ (ನಮ್ಮ ವಿಶೇಷ ಬಾತ್ಮೀದಾರರಿಂದ)"

ಶೇಷನಿಗೆ ಮರುಭೂಮಿಯ ನಡುವೆ ತಾಳೆಮರಕ್ಕೆ ಕಟ್ಟಿದ ಒಂಟೆಯನ್ನು ನೋಡಿದಂತಾಯಿತು.

ವೀರಣ್ಣ ಮುಗಿಲುಹಳ್ಳಿಯ ಕನ್ನಡ ಚಳುವಳಿಯ ಪಿತಾಮಹರಲ್ಲೊಬ್ಬ. ಶೇಷನೇ ಪ್ರಪಿತಾಮಹ.

ಸನ್ಮಾನ ಸಮಾರಂಭ (ಕಡೆ ಸಂಜೆಯಲ್ಲಿ)

ಶೇಷ ಅಂದು ಊಟವಾದಮೇಲೆ ಕನ್ನಡ ನಾಡಿನ ಮೂಲೆ ಮೂಲೆಗಳಿಗೆ ಪತ್ರ ಬರೆದ. ಪತ್ರಗಳು ಆರಂಭವಾದ ರೀತಿ ಬೇರೆ ಬೇರೆ. ಉದಾಹರಣೆಗೆ

೧) ಕನ್ನಡದ ಹೆಣ್ಣುಮಕ್ಕಳ ಮನದಾಳವನ್ನೂ, ಕನ್ನಡ ವೀರರ ಕೆಚ್ಚೆದೆ ಯನ್ನೂ ಅನುಪಮವಾಗಿ, ಅಭೂತಪೂರ್ವವಾಗಿ, ಅಸದೃಶವಾಗಿ ವರ್ಣಿಸಿದ ಕನ್ನಡ ಸಿನೀ ಲೇಖಕಾಗ್ರಗಣ್ಯರಾದ ಅಣ್ಣ...ರವರೇ.

೨) "ಮಾತಿನಲ್ಲಿ ಕವಲಿಲ್ಲ, ಲೆಕ್ಕ ತಪ್ಪದು, ನನ್ನ ಹಠಕ್ಕೆ ಎಂದೂ ಸೋಲಿಲ್ಲ" ಎಂದು ಖಳ ನಾಯಕಿಯಾಗಿಯೂ "ಕೂಡಿದ ಮನದಲ್ಲಿ ಕವಲಿಲ್ಲ, ಪ್ರೇಮ ಅಮರ, ನನಗೂ ನನ್ನ ನಲ್ಲನಿಗೂ ಎಂದೂ ಸೋಲಿಲ್ಲ" ಎಂದು ನಾಯಕಿಯಾಗಿಯೂ ಘೋಷಿಸಿ ಕನ್ನಡ ಜನಮನವನ್ನು ಸೆರೆಹಿಡಿದ ಸ್ವಪ್ನರಾಣಿ ಕುಮಾರಿ ಬುದ್ಧಿದಾ ಅವರೇ,...ಇತ್ಯಾದಿ

ಪತ್ರದ ಪಾಠ ಇಂತಿತ್ತು :

ಕನ್ನಡಕ್ಕಿಂದು ಗಂಡಾಂತರವೊದಗಿದೆ. ನಮ್ಮ ತನುಮನಧನಗಳನ್ನು ಮುಡಿಪಾಗಿಟ್ಟು ಹೋರಾಡದೆ ಕನ್ನಡ ಉಳಿಯುವಂತಿಲ್ಲ. ಕನ್ನಡ ಸಮರದ ಮುಂಚೂಣಿಗೆ ಮುಗಿಲೂಹಳ್ಳಿಯ ಕಾಣಿಕೆಯಾದ ಕನ್ನಡ ವೀರ ಶ್ರೀ ವೀರಣ್ಣನವರಿಗೆ "ಅಪ್ರತಿಮ ವೀರ" ಎಂಬ ಬಿರುದನ್ನು ಸಲ್ಲಿಸುವ ಸಲುವಾಗಿ ಮುಂದಿನ ತಿಂಗಳೂ ಸಮಾರಂಭ ನಡೆಯಲಿದೆ. ತಾವು ದಯೆಯಿಟ್ಟು ಬಂದು ಅಧ್ಯಕ್ಷ/ಮುಖ್ಯ ಅತಿಥಿ/ಭಾಷಣಕಾರ/...ತೆ ವಹಿಸಿ/ಗಳಾಗಿ/ರಾಗಿ, ಭಾಗವಹಿಸಬೇಕು. ಕನ್ನಡಮ ಗೆಲ್ಗೆ. ಪರಕೀಯರ ದಬ್ಬಾಳಿಕೆಗೆ ಧಿಕ್ಕಾರ.

ಭವದೀಯ,
ಶೇಷರಾಜ್

ಬೇಯದ ಬೇಳೆ

"ನಿನ್ನೆ ತಂದಿಹ ಬೇಳೆ ಬೇಯಲಿಲ್ಲವೇ ಹೇಳು ?
ಸಕ್ಕರೆಯ ಹಳಿಯಿಲ್ಲವೆನುವೆ ಯಾಕೆ ?
ನಿನ್ನ ಕೆಂದುಟಿಗಳಲಿ ಸಕ್ಕರೆಯ ಸವಿಯಿಹುದು !
ಅಂಗಡಿಯ ಸಕ್ಕರೆಯು ಗೊಡವೇಯಾಕೆ ? ! "
—ಹೀಗೆನಲು ನಾನು ನನ್ನವಳು ಮೂಗಂತಿ ಮೆರೆದು
ಹಾಗು–ಹೀಗೂ ಹೆರಳ ತೂಗಿ ತೊನೆದು !
" ನಿಮ್ಮ ಬೇಳೆಯು ನನ್ನ ಮುಂದೆ ಬೇಯುವುದಿಲ್ಲ"
—ಎಂದು ನುಡಿದಳು "ತುಟಿಯು ಕಾಫಿಗಲ್ಲ !"

—**ತ್ರಿಮೂರ್ತಿ**

* * * *

ಸೂಚನೆ

ಗಣಪತಿ ನೋಡಲು ಬರುವವರಕ್ಷತೆ
ಈ ಕಡೆ ಡಬ್ಬಿಗೆ ಹಾಕಿಬಿಡಿ.
ಎರಚುವುದೇಕೆ ? ಸಂಗ್ರಹವಾದರೆ,
ಒಂದೊಪ್ಪೊತ್ತಿಗೆ ಸಾಕು ಬಿಡಿ !

—ಈಶ್ವರ ಚಂದ್ರ

ಕರ್ಮಣ್ಯೇವಾಧಿಕಾರಸ್ತೇ

ಎಲ್ಲವೂ ಅಕಸ್ಮಾತ್. ಆ ಬಿರುಗಾಳಿ ಬೀಸಿದ್ದು ಅಕಸ್ಮಾತ್. ಜೋರು ಮಳೆ ಬಿದ್ದಿದ್ದು ಅಕಸ್ಮಾತ್. ಹತ್ತಿರವೇ ಆ ಆಫೀಸಿದ್ದದ್ದು ಅಕಸ್ಮಾತ್. ಆಫೀಸನ್ನು ಹೊಕ್ಕಿದ್ದೂ ಅಕಸ್ಮಾತ್. ಇಷ್ಟೆಲ್ಲಾ ಅಕಸ್ಮಾತ್ ಆದಮೇಲೆ ಆಫೀಸಿನ ಬಾಗಿಲಮೇಲೆ ಹಾಕಿದ್ದ ಫಲಕದ ಕಡೆ ನನ್ನ ದೃಷ್ಟಿ ಅಕಸ್ಮಾತ್ ಹರಿದುದು ಸ್ವಾಭಾವಿಕವಾಗಿತ್ತು. ಆ ಆಫೀಸಿನ ಆ ಫಲಕದಮೇಲೆ ಏನು ಬರೆದಿತ್ತು? ಅಂತ.

"ಕರ್ಮಣ್ಯೇವಾಧಿಕಾರಸ್ತೆ ಮಾಫಲೇಶು ಕದಾಚನ"

ಹೌಹಾರಿದೆ. ಇದೆಂತಹ ಆಫೀಸು? ಇದು ಆಫೀಸೇ! ಸಾಧು ಸಮಾಜದ ಕೇಂದ್ರ ಕಚೇರಿಯೋ? ಸೂಕ್ಷ್ಮವಾಗಿ ನೋಡಿದೆ. ಆಯೋಜನ ಮಂಡಳಿಯ ಆಫೀಸೇ! ಬಾಗಿಲ ಬಳಿ ತೂಕಡಿಸುತ್ತಿದ್ದ ಚಪ್ರಾಸಿ ಎಚ್ಚರಗೊಂಡಾಗ ಆ ಫಲಕವನ್ನು ಅವನಿಗೆ ತೋರಿಸಿ "ಅದನ್ನು ಯಾಕೆ ಹಾಕಿದ್ದಾರೆ?" ಎಂದು ಕೇಳಿದೆ. "ಚೆಂದಕ್ಕೆ" ಅಂದು ಅವ ನಕ್ಕ. ಇವನಿಗೇನು ಗೊತ್ತು ಅಂತ ಸುಮ್ಮನಾದೆ. ಒಳಗಿನಿಂದ ಆಫೀಸರ್ ತರಹ ಕಂಡವರೊಬ್ಬರು ಬಂದರು. ಅವರನ್ನು ಕೇಳಿದೆ. ಅವರು ಪದ ವಿಭಾಗಮಾಡಿ ಅರ್ಥ ಹೇಳಿದರು. ಇಷ್ಟೂ ಗೊತ್ತಿಲ್ಲವೇ ಎಂದು ಮೂದಲಿಸುವ ದೃಷ್ಟಿ ಹಾಯಿಸಿ ಹೋದರು.

ಮಳೇನೂ ನಿಂತಿತು. ನಾನು ಮನೆಯತ್ತ ಹೊರಟೆ.

ಮಗು ಸತ್ತರೂ ಸೂತಕ ಬಿಟ್ಟಿಲ್ಲ ಅಂದ ಹಾಗೆ, ಆ ಫಲಕ ಮನೆಗೆ ಬಂದ ಮೇಲೂ ಕಾಡುತ್ತಿತ್ತು. ತಲೆಯಲ್ಲೆಲ್ಲಾ ಅದರದೇ ಗೌಜಗದ್ದಲ. "ಅಲ್ಲಿ ಯಾಕೆ? ಆ ಬೋರ್ಡು"

ಅಶೋಕ ಚಕ್ರ ಲಾಂಛನದಲ್ಲಿರುವ ನಮ್ಮ ಸರಕಾರ ಅಶೋಕನ ಕಾಲದಲ್ಲಿದ್ದಂತೆ ರಾಜಕೀಯದಲ್ಲಿ ಧರ್ಮವನ್ನು ಹಾಸು ಹೊಕ್ಕಾಗಿಸುತ್ತಿದ್ದಾರೆಯೋ? ಗತ ವೈಭವದ ವಿಜಯನಗರ ಸಾಮ್ರಾಜ್ಯದಂತೆ ಧರ್ಮ ಸಂಸ್ಥಾಪನೆಗೆ ಪ್ರಯತ್ನಿಸುತ್ತಿದ್ದಾರೆಯೋ? ಹೀಗೆಲ್ಲಾ ಗಂಭೀರವಾದ ಆಲೋಚನೆಗಳು ತಲೆಯಲ್ಲಿ ದುಂಬಿ ಗುಡುತ್ತಿದ್ದವು. ಸೋತ ಧರ್ಮರಾಯನ ತರಹ ಚಿಂತಾಕ್ರಾಂತನಾಗಿ ತಲೆಯಮೇಲೆ ಕೈ ಇಟ್ಟು ಕೂತೆ.

ನಾಗೇಶ ಬಂದ. ನನ್ನನ್ನು ನೋಡಿ ಬೆಚ್ಚಿದ, "ಯಾವ ಸಂಶೋಧನಾ ಹುಳು ನಿನ್ನ ತಲೆಯನ್ನು ಬೋರುತ್ತಿದೆ" ಎಂದು ಕೇಳಿದ ವಿಚಾರವನ್ನೆಲ್ಲ ಅವನಿಗೆ ಹೇಳಿದೆ. ಸಾಮಾನ್ಯವಾಗಿ ಮಾತಿಗೆ ಮುಂಚೆ ನಗುವ ಪ್ರಕೃತಿ ಅವನದು. ನನ ಪ್ರಗಲ್ಭ ಚಿಂತೆಯನ್ನು ಮನನಮಾಡಿ ಅವ ಸಮಸ್ಯೆಯ ಪರಿಹಾರವನ್ನು ವರ್ಣಿಸ ತೊಡಗಿದ.

"ನಮ್ಮ ಸರಕಾರ ಪರದೇಶಗಳಿಂದ ಹಣದ ಹೊಳೆಯನ್ನೇ ಹರಿಸಿಕೊಂಡು ಬಂದಿವೆ. ಬಡ್ಡಿಯ ಭಯವಿಲ್ಲದೆ ಸಾಲವನ್ನು ಬೊಗಸೆ ಬೊಗಸೆ ತಂದಿದೆ. ಭಾರೀ ಭಾರಿ ಯೋಜನೆ ಹಾಕಿ ಭಾರೀಭಾರಿ ಖರ್ಚು ಮಾಡಿದೆ. ಹುಚ್ಚ ಮಂಗ ಹೆಂಡ ಕುಡಿದಂತೆ ಬೀರಾಡಿದೆ ತೂರಾಡುತ್ತಿದೆ. ಇಷ್ಟೆಲ್ಲಾ ಮಾಡಿದರೂ ಫಲ ಏನು ಅಂತ ಅರೆಕ್ಷಣ ಯೋಚಿಸಿದೆಯೋ ? ಫಲವಿಲ್ಲವಲ್ಲ ಎಂದು ಬೆದರಿದೆಯೋ ?

ಕರ್ಮಣ್ಯೇವಾಧಿಕಾರಸ್ತೇ ನಮ್ಮ ಯೋಜನಾ ಆಫೀಸು, ಎಂದೆಂದಿಗೂ ಅಲ್ಲಿ ಫಲದ ನೆರಳೂ ಬೀಳುವುದಿಲ್ಲ. ಶುದ್ಧ ವೇದಾಂತಿಗಳಪ್ಪ ಅವರು. ಕರ್ಮ ಗೃಹಸ್ಥ ಸುಫಲ ಸಂನ್ಯಾಸಿಗಳು. ಆದಕ್ಕೇ ಆ ಆಫೀಸಿನಲ್ಲಿ ಆ ಫಲಕ" ಎಂದು. ದಿಟವಿರಬಹುದು ಎನ್ನಿಸಿತು ನನಗೆ. ಮೊನ್ನೆತಾನೆ ಕೇಂದ್ರದ ಮಂತ್ರಿಗಳು ಹಸಿವೆಯಿಂದ ಭಾರತದಲ್ಲಿ ಯಾರೂ ಸಾಯುವುದಿಲ್ಲ" ಎಂದು ಘಂಟಾಘೋಷವಾಗಿ ಹೇಳಲಿಲ್ಲವೇ ? ಗೀತೆಯಲ್ಲಿ ಹೇಳಿಲ್ಲವೇ ? ಆತ್ಮವು ಅವಿನಾಶಿ, ಸುಟ್ಟರೆ ಉರಿಯುಲ್ಲ. ಕತ್ತರಿಸಿದರೆ ಹರಿಯುಲ್ಲ ನೀರು ನೆನೆಯಿಸುವುದಿಲ್ಲ. ಗಾಳಿಗೆ ಹಾರುಲ್ಲ ಎಂದು. ಅಂತಹ ಆತ್ಮದ ಅಂಗಿಗಳು ನಾವು. ಒಂದು ಅಂಗಿ ಹೋದರೆ ಇನ್ನೊಂದು ಬರುತ್ತೆ. ಅಂಗಿಕ್ಷಯಿಸಿದರೆ ಆದ್ಮ ಕ್ಷಯಿಸಬೇಕೇ ?

ನಾಗೇಶನ ತರಹ ನಾನೂ ಅನ್ನುವಂತಾಯಿತು. "ಕೂಳಿಲ್ಲದೆ ಇಲ್ಲಿ ಯಾರೂ ಸಾಯಲಾರರು. ಕೇವಲ ಜೀವ ಹೋಗಿ ಸಾಯುತ್ತಾರೆ ಅಷ್ಟೆ"

ಮೂರ್ಖ

ಕಪ್ಪು ಚಿನ್ನ

ಮಹಿಳೆಯು ಪ್ರಧಾನಿ ಆದಳು ನೋಡಿರಿ
ಚಿನ್ನಕೆ ಬಂದಿತು ಬಿಡುಗಡೆಯು !
ಈ ಗಡಿಬಿಡಿಯಲಿ ಮುಂಬಯಿ ನಗರದಿ
ಸಿಕ್ಕಾ ಚಿನ್ನಕೆ ನಿಲುಗಡೆಯು !

—ಈಶ್ವರಚಂದ್ರ

ಅವರು ತಂದುಕೊಟ್ಟ ಸೀರೆ

ಯಾವೊತ್ತಿಂದ ಕೇಳಿ ಕೇಳಿ ಕೆರಳಿಯೋ ತಂದುಕೊಟ್ಟಿದ್ದರು ಆ ಸೀರೆಯನ್ನ ಅವರು. ಕೆರಳೋಕೆ ಕಾರಣವಿಲ್ದೆ ಇಲ್ಲ, ದುಬಾರಿ ಸೀರೇನೆ ಬೇಕು ಎಂದಾಗ ದಂಗಾಗಿದ್ವರಾದರೂ, ಕೊನೆಗೊಮ್ಮೆ ನನ್ನ ಪಟ್ಟು ಹಿಡಿದ ಹಟಕ್ಕೆ ಸೋತು " ಬಿಕನಾಸಿ " ಎಂದು ಬೈಯುತ್ಲೆ, ಅಂಗಡಿ ಮೆಟ್ಲು ಏರಿ ಶೇಟು ಹೇಳಿದ ದರ ತೆತ್ತು ತಂದು ಕೊಟ್ಟುಬಿಟ್ಟರು ಸೀರೆಯನ್ನ.

ಸೀರೆ ಮನೆಗೆ ಬರುತ್ಲೇ ಉಟ್ಟು ಚಂದ ನೋಡುವ ಆತುರದ ಜೊತೆಗೆ ಕಾತರ ಅವರಿಗೆ. ಹೊಸ ಸೀರೆಯನ್ನುಡುವಾಗ ವಾರ-ತಿಥಿ, ಕಾಲಮಾನ, ದೋಷ (ಪ್ರ) ದೋಷಗಳನ್ನು ಅವಗಾಹನೆಗೆ ತಂದುಕೊಂಡು ಅಳೆದು ಸುರಿದು ಉಡುವ ಪದ್ಧತಿ ನನ್ನದು.

ಸೋಮವಾರ ಆಯುಸ್ಸು ಕ್ಷೀಣ, ಮಂಗಳವಾರ ರಾಹು ಬಡಿದೀತು. ಶನಿವಾರ ವಾರವೇ ಒಳ್ಳೆಯದಲ್ಲ, ಭಾನುವಾರ ಸೀರೆ ಬೇಗ ಹರಿದು ಹೋಗುವ ಸಂಭವ ಇತ್ಯಾದಿ ಇತ್ಯಾದಿ. ಯಾರಿಂದಲೋ ಕೇಳಿ ತಿಳಿದು ಪಾಲಿಸುತ್ತ ಬಂದಿದ್ದೆ. ಇನ್ನುಳಿದ ಒಳ್ಳೆಯ ವಾರವೆಂದರೆ ಒಂದರ ಮುಂದೊಂದು ಬರುವ ಬುಧವಾರ, ಗುರುವಾರ ಶುಕ್ರವಾರಗಳು. ವಾರ ಒಳ್ಳೆಯದಾದರೂ ಉಡುವ ಕಾಲದಲ್ಲಿ ಗಳಿಗೆ ನೋಡಿ ಮನ ಒಗ್ಗಿ ಮನಸ್ಸು ಹಿಗ್ಗಿದರೇನೆ ಉಡುತ್ತಿದ್ದುದು.

ಅವರು ತಂದುಕೊಟ್ಟ ಸೀರೆಗೆ ತಿಂಗಳು ಸರಿದು ಹೋಗಿದ್ದರೂ, ಉಡೋಕಿನ್ನೂ ಒಳ್ಳೆಯ ಗಳಿಗೆ ಕೂಡಿ ಬಂದಿರಲಿಲ್ಲ. ಅಂದು ಭಾನುವಾರ ಹಳೆ ಸೀರೇನೆ ಉಟ್ಟು ಅವರೊಂದಿಗೆ ಹೊರಟಾಗ, ರೇಗಿ ಅವರೆಂದದ್ದು " ಅಲ್ವೇಸಿ ಹಾಗೆ ನನ್ಜೊತೇಲಿ ಬರ್ಬೇಡ, ಪೆಟ್ಟಿಗೆ ಒಳಗಿಟ್ಟು ನುಸಿ ಹಿಡ್ದು ಹಾಳಾಗ್ಹೋಗುತ್ತೆ ಸೀರೆ. ಒಳ್ಳೆಯ ಮಾತ್ನಿಂದ ಆ ಸೀರೇನೆ ಉಟ್ಕೋಂತ " ಅವರೆನ್ನುತ್ತಲೇ ಹೆದರಿಕೆಯಿಂದ ಬಹು ಮೆಲ್ಲಗೆ ಉಸುರಿದ್ದೆ, " ಮುಂದಿನ ಶುಕ್ರವಾರ ಖಂಡಿತ ಉಡ್ತೇನ್ರಿ. ಈ ದಿನ ವಾರ ಏನೇನೂ ಒಳ್ಳೆಯದಲ್ಲ " ಎಂದಾಗ, ಉಟ್ರೇನಾಗುತ್ತೆಂತ ಕೊಶ್ನಿಸಿದರು.

" ಆಗೋದೇನು ಬೇಗ ಹರಿದ್ಹೋಗುತ್ತೆ " ಅಂತ ಸಲೀಸಾಗಿ ಉತ್ರಕೊಟ್ರೆ ಬಿದ್ದೂ ಬಿದ್ದು ನಕ್ಕರು. ನನ್ನ ಮಾತನ್ನು ಸಮರ್ಥಿಸಿಕೊಳ್ಳಲು ನಾನೆಂದೆ ಸುಳ್ಳಲ್ಲ ನಿಜವಾಗ್ಲು ಗ್ರಹಚಾರಕ್ಕೆ ಈವತ್ತೆ ಉಟ್ಟೆ ಅಂದ್ಕೊಳ್ಳಿ, ಪೋಕರಿ ಇದ್ದಕ್ಕಿದ್ದಂತೆ ಅಳೋದು, ನಾನು ಎತ್ಕೊಳ್ಳೋದು. ಎತ್ಕೊಳ್ಳುತ್ಲೇ ಹೇಸಿಗೆ ಮಾಡೋದು, ಆ ಕೂಡ್ಲೇ ಹೊಸ ಸೀರೇನ ಒಗೆಯೋದು ಅಲ್ಲಿಗೆ ಸೀರೇಗೆ ಅರ್ಧ ಆಯುಸ್ಸು ಮುಗಿ ತೂಂತ್ಲೆ ಲೆಖ್ಖ ಅಲ್ವೇನ್ರಿ ! ಅಂತ ವಿವರಣೆ ನೀಡುತ್ಲೇ " ಹೌದು " ಎನಿಸಿಯೋ ಏನೋ ತೆಪ್ಪಗಾದರು.

ಇನ್ನೊಂದು ತಿಂಗ್ಳಲ್ಲಿ ಹಬ್ಬಗಳ ಹೊಡೆತ ಸಂಭ್ರಮಂದ ಕಡತ ಆಗ್ಲೇ ಹೊಸ ಸೀರೆ ಉಟ್ಟಿರಾಯ್ತು ಅಂತ ಹಾಗೆ ಟ್ರಂಕೊಳಗೆ ಹಳೇಸೀರೇಲಿ ಹೊಸ ಸೀರೇನ ಭದ್ರ ವಾಗಿ ಮಡಿಚ್ಚಿಟ್ಟು ಬರುವ ಆ ದಿನಕ್ಕಾಗಿ ಕಾದೆ.

ಇದ್ದಕ್ಕಿದ್ದಂತೆ ತೌರಿಗೆ ಹೋಗುವ ಪ್ರಸಂಗ ಬಂತು. ಅಜ್ಜಿಗ್ಯಾಕೋ ಮೈ ಬೆಚ್ಚಗಾಗಿದೆ. ನೀ ಬರ್ಲೇ ಬೇಕು, ಜೊತೆಗೆ ನೀನಿದ್ರೇನೆ ಧೈರ್ಯಂತ ಅಮ್ಮ ನನ್ನ ತಮ್ಮ ಸೀನಿಯ ಕೈಲಿ ಪತ್ರ ಬರೆಸಿಹಾಕಿದ್ದಳು, ಸೀನಿ ಬೇರೆ ಮುಂದ್ದುಮುಂದ್ದಾಗಿ ನೀನು ಬರ್ಲೇ ಬೇಕು ಕಣೆ ಅಕ್ಕ, ನಿನ್ನ ಕಾಣ್ದೆ ತುಂಬ ದಿವ್ಸ ಆಗ್ಹೋಯ್ತು ಅಂತ ಕುಂಬಳಕಾಯಿ ಅಕ್ಷರದಲ್ಲಿ ಬರೆದಿದ್ದು ನೋಡಿ ಅವ ಎಂ. ಎ. ಪ್ಯಾಸು ಮಾಡಿದಷ್ಟು ಸಂಭ್ರಮದಿಂದ ಹಿಗ್ಗಿ ಹೀರೇಕಾಯಾಗಿದ್ದೆ. ಅವರನ್ನೆಲ್ಲ ಕಾಣಬೇಕೂಂತಾಗಂತ್ಲೆ, (ನೌಕರಿ ಮಾಡ್ತಿದ್ದ ನಾನು ರಜಾ ಅರ್ಜಿ ಸಲ್ಲಿಸಿ) ನಿಂತಕಾಲಿನಲ್ಲೇ ಹೊರಟುಬಿಟ್ಟೆ.

ಹದಿನೈದು ದಿವಸದಮೇಲೆ ಮನೆ ನೆನಪಾಗಿ ಹೊರಟು ನಿಂತಾಗ ಇನ್ನು ನಾಲ್ಕು ದಿನ ಇದ್ದು ಹೋಗು ಎಂದರು ಅಪ್ಪ ಅಮ್ಮ ಒಕ್ಕೊರಲಿನಿಂದ. ಸೀನಿ ಮರೆಯಲ್ಲಿ ನಿಂತು ಮುಸಿ ಮುಸಿ ಅತ್ತ. ಕರುಳು ಚುರ್ ಎನಿಸಿ ಮತ್ತೆರಡು ದಿನ ಉಳಿಯಲೇ ಬೇಕಾಯಿತು. ತಿಂಗಳವರೆಗೂ ತೌರಲ್ಲಿ ಝಾಂಡಾ ಹೂಡಿ ಮನೆಗೆ ಮರಳಿದ್ದೆ.

ನಾದಿನಿ ಬಂದು ನಾಲ್ಕು ದಿನ ಇದ್ದು ಹೋದ ಸುದ್ದಿಯನ್ನು ಮನೆಗೆ ಬರುತ್ತಲೇ ತಿಳಿಸಿದರು ಅವರು. ಸದ್ಯ ನಾನು ಇಲ್ಲದ ಸಮಯದಲ್ಲಿ ಬಂದದ್ದೇ ಒಳ್ಳೆಯದಾಯಿತು, ಇದ್ದಿದ್ದರೆ ಅಪರೂಪಕ್ಕೆ ಬಂದ ನಾದಿನಿಗೆ ಹೊಸ ಸೀರೆ ಉಡಿಸಿ ಕಳುಹಿಸಬೇಕಾಗಿತ್ತು. ಹಾಗೇ ಮಾಡಿ ಸಾಲದ ಶೂಲೇನ ಎದುರಿಸಬೇಕಾಗಿತ್ತು. ಬೇಡಾಂತ ಹೇಳಿ ಕೆಟ್ಟವಳೆನಿಸಿಕೊಳ್ಳೋದು ತಪ್ಪಿತು ಎಂದು ಮನದಲ್ಲೇ ಅಂದು ಕೊಂಡು ಸಮಾಧಾನ ಪಟ್ಟೆ.

ಅದೊಂದು ಶುಕ್ರವಾರ. ತಿಥಿ ವಾರ ಗಳಿಗೆ ಕಾಲಮಾನಗಳು ಕೂಡಿಬಂದು ಒಳ್ಳೆಯ ಪ್ರಶಸ್ತವಾದ ದಿನವೆಂದು ತಿಳಿದು ಬಂತು ನೆರೆ ಮನೆಯ ಮೀನಾಕ್ಷಿ ಹೊಸ ಸೀರೆಯುಟ್ಟು ನನ್ನ ಮುಂದೆ ಮೆರೆದಾಡಿದಾಗ, ಸರಿ ನಾನು ಹೊಸ ಸೀರೆ ಉಡುವು ದೆಂದು ತೀರ್ಮಾನಿಸಿ ಪೆಟ್ಟಿಗೆಯ ಬಾಗಿಲು ತೆರೆದೆ. ಅಚ್ಚುಕಟ್ಟಾಗಿ ಸುತ್ತಿಟ್ಟಿದ್ದ ಹಳೆಯ ಸೀರೆ ಹರಡಿ ಬಿದ್ದಿತ್ತು. ಅವರು ತಂದುಕೊಟ್ಟ ಹೊಸ ಸೀರೆ ಮಂಗಮಾ ಯವಾಗಿತ್ತು.

ಅಲ್ಲಿಯೇ ನಿಂತಿದ್ದ ಅವರು ಪಿಸಪಿಸನೆ ನಕ್ಕಾಗ, ಗಡಬಡಿಸಿ ಕೇಳಿದೆ ಏನಾಯ್ತು ಸೀರೆ ಎಂದು.

ಆ ದಿನವೇ ವಾರಿಜಳಿಗೆ ಕೊಟ್ಟು ಕಳಿಸ್ದೆ. ಆ ಹೊಸ ಸೀರೆಯ ಋಣ ಅವರ ತಂಗೀಗೆ ದಕ್ಕಿತ್ತು. ಕೇಳಿ ನನ್ನ ಕಣ್ಣಲ್ಲಿ ಪಳಪಳನೆ ನೀರು ಚಿಮ್ಮಿತ್ತು.

“ನಾವಿಬ್ಬರೂ ದುಡೀತೇವಲ್ಲ. ಎಂದಾದ್ರು ಕೊಂಡ್ರಾಯ್ತು. ಅದಕ್ಯಾಕ ಳೋದು ಎಂದರು” ಅವರು ಉದಾರತೆಯಿಂದ.

ಶ್ರೀಮತಿ ಪ್ರೇಮಾ ಭಟ್

ಗಂಟಲು ಬಿಗಿಯುತ್ತೆ—ಕತ್ತು ನೋಯುತ್ತೆ

"ಮೂರು ಗಂಟೆ ಹೊತ್ತು ವರ್ಕ್‌ಷಾಪಿನಲ್ಲಿ ಕೆಲಸ ಮಾಡಿದರೆ ಕತ್ತು, ಮೆಡಶೆರ ಎಲ್ಲಾ ನೋವಾಗುತ್ತೆ ಡಾಕ್ಟ್ರೇ, ಉಸಿರು ಬಿಡುಕ್ಕೇ ಕಷ್ಟವಾಗುತ್ತೆ ಗಂಟಲು ಬಿಗಿಯುತ್ತೆ. ಕತ್ತನ್ನು ತಿಕ್ಕಿದರೂ ನೋವು ಇಳಿಯುಲ್ಲ" ಅಂದ ಮೂರನೆಯ ವರ್ಷದಲ್ಲಿ ಓದುತ್ತಿದ್ದ ಇಂಜಿನಿಯರಿಂಗ್ ವಿದ್ಯಾರ್ಥಿ.

"ಯಾಕಪ್ಪಾ ಹಾಗೆ, ಕತ್ತು ಬಗ್ಗಿಸಿಕೊಂಡು ಕೆಲಸ ಮಾಡ್ತೀಯಾ ? ಕೆಲಸದ ಮೇಜು ತುಂಬಾ ತಳಕ್ಕೋ ಅಥವಾ ಎತ್ತರಕ್ಕೋ ಇದೆಯೋ ?" ಎಂದೆ. ವಿದ್ಯಾರ್ಥಿಯೇನೋ ಸಾಮಾನ್ಯ ಎತ್ತರದವನೇ. ಕುಳ್ಳೂ ಅಲ್ಲ, ಲಂಬೂ ಛಡಿಯೂ ಅಲ್ಲ.

"ಅಂತದೇನೂ ಇಲ್ಲ, ಡಾಕ್ಟ್ರೇ ! ಎತ್ತರ ಎಲ್ಲಾ ಸಮನಾಗಿಯೇ ಇದೆ."

"ಎಷ್ಟು ತಿಂಗಳಿಂದ ಹೀಗೆ ನೋವು ಬರುತ್ತಪ್ಪಾ ?"

"ಈಗೊಂದು ಹದಿನೈದು ದಿನಗಳಿಂದ ಅಷ್ಟೇ"

"ಅದಕ್ಕೆ ಮುಂಚೆ ಇದೇ ಕೆಲಸ ಮಾಡಿದರೆ ನೋವು ಬರುತ್ತಿತ್ತೇ"

"ಇಲ್ಲಾ ಡಾಕ್ಟ್ರೇ ! ಈಗಲೇ ಹೀಗೆ ಆಗ್ತಾ ಇರೋದು"

"ತುಂಬಾ ದೊಡ್ಡದೇನಪ್ಪ, ವರ್ಕ್‌ಷಾಪು"

"ಸುಮಾರು ಉದ್ದ ಇದೆ, ಡಾಕ್ಟ್ರೇ, ನೂರು ಜನ ಕಲಿಯಬಹುದು ಒಟ್ಟಿಗೆ"

"ನಿನ್ನ ಮೇಜು ಎಲ್ಲಿದೆ, ಒಂದು ತುದಿಯಲ್ಲೋ, ಮಧ್ಯದಲ್ಲೋ"

"ಒಂದು ತುದಿಯಲ್ಲಿದೆ, ಕಿಟಕಿ ಹತ್ತಿರಾನೆ, ಡಾಕ್ಟ್ರೇ"

"ಕಿಟಕೀಲಿ ಏನು ಕಾಣಿಸುತ್ತಪ್ಪ !"

"ಲೈಬ್ರೆರಿ ಕಾಣಿಸುತ್ತೆ, ಡಾಕ್ಟ್ರೇ, ಮಹಡಿ ಇರೋ ಲೈಬ್ರೆರಿ, ನೀವು ನೋಡಿಲ್ಲವೇ ?"

"ನೋಡಿದ ಹಾಗೆ ಜ್ಞಾಪಕಾಪ್ಪ. ಲೈಬ್ರೆರಿಯಲ್ಲಿ ತುಂಬಾ ಜನ ಓದುತ್ತಾರೆಯೇ ?

"ಇಲ್ಲ ಡಾಕ್ಟ್ರೇ ! ಕೆಲವರು ಪುಸ್ತಕ ಎರವಲು ಪಡೆಯುಲು ಹೋಗುತ್ತಾರೆ. ಮಿಕ್ಕವರು ಹೋಗೋದೇ ಇಲ್ಲ."

"ಲೈಬ್ರೆರಿಯಲ್ಲಿ ಕೂತು ಯಾರೂ ವಿದ್ಯಾರ್ಥಿಗಳು ಓದುಲ್ಲವೇ ?"

"ಮೂರು ನಾಲ್ಕು ಜನ ಹೆಣ್ಣು ಹುಡುಗಿಯರು ಕಾಲೇಜಿಗೆ ಸೇರಿದ್ದಾರೆ. ಅವರು ಮಾತ್ರ ಓದುಕ್ಕೆ ಲೈಬ್ರೆರಿಗೆ ಹೋಗುತ್ತಾರೆ."

"ಹಾಗೆಯೆ ವಿಷಯ ! ಇನ್ನು ಮೇಲೆ ವರ್ಕ್‌ಷಾಪಿನಲ್ಲಿ ಕೆಲಸ ಮಾಡೋವಾಗ ಕಿಟಕಿ ಬಾಗಿಲು ಹಾಕಪ್ಪ. ಅಥವಾ ಮೇಜನ್ನೇ ನೋಡ್ತಾ ಇರು–ಕತ್ತು ನೋವು ಬರಲ್ಲ-ಗಂಟಲೂ ಬಿಗಿಯುಲ್ಲ."

...ಮಾವೋಕ ಶರಣಂ ವ್ರಜ!

ಜಗತ್ತಿನಲ್ಲಿ ತಾವು ಬುದ್ಧಿವಂತರೆಂದು ತಿಳಿದುಕೊಂಡಿರುವವರೆಲ್ಲರೂ ಇನ್ನು ಮುಂದೆ ತಮ್ಮ ಆ ಭ್ರಮೆಯನ್ನು ಬಿಡಬೇಕು. ಬೇರೆಲ್ಲವನ್ನೂ ಮರೆತು ಇನ್ನು ನಾವು ಆಶ್ರಯಿಸಬೇಕಾದುದು ಸಕಲ ಜ್ಞಾನಿಗಳಿಗೂ ಮೂಲ ಪುರುಷನಾದ ಮಾವೋ ಮಾವನನ್ನು. ಆತನ ಜ್ಞಾನ ಭಂಡಾರದಲ್ಲಿ ಮುಳುಗಿದರೆ ಎಲ್ಲ ಸಮಸ್ಯೆಗಳಿಗೂ ಉತ್ತರ ಸಿಗುತ್ತದೆ... "ಸಿಗುತ್ತದೆ" ಏನು—ಸಿಗಲೇಬೇಕು. ಹಾಗೆ ಸಿಗದಿದ್ದರೆ ನಿಮ್ಮಲ್ಲಿ ಬೂರ್ಜ್ವಾ ರೋಗಾಣುಗಳು ಇನ್ನೂ ಉಳಿದಿದೆಯೆಂದರ್ಥ. ಅದಕ್ಕೆ ಮದ್ದು ಮಾವೋ ಮಾವನೊಡನೆ ಉಂಟು.

ಷೇಕ್ಸ್‌ಪಿಯರ್ ಶ್ರೀಮಂತವರ್ಗದ ಭಾವಜೀವಿ. ಟಾಲ್‌ಸ್ಟಾಯಿ ರಷ್ಯದವನಾದ್ದರಿಂದ ಶುದ್ಧ ರಿವಿಷನಿಸ್ಟ. ರಿವಿಷನಿಸ್ಟ ಎಂದರೆ? ಶುದ್ಧ ಶುಂಠಿಯಾಗಿರಲು ತಿಳಿಯದವ. ಇತ್ಯಾದಿ, ಇತ್ಯಾದಿ ಪರಮ ಸತ್ಯಗಳನ್ನು ಮಾವೋ ಮಾವನ ಹಿಂಡು ಜಗತ್ತಿಗೆ ಬಿತ್ತರಿಸುತ್ತಿದೆ. ಎಲ್ಲ ಧರ್ಮಗಳನ್ನೂ ತ್ಯಜಿಸಿ, "ಮಾವೋಕ ಶರಣಂ ವ್ರಜ" ಎಂಬ ಮಾವನ ಪಟಗಳು ಚೀಣಾದಲ್ಲೆಲ್ಲ ಪೂಜೆಗೆ ಸಿದ್ಧವಾಗಿ ನಿಂತಿವೆ. ಹೊಸ ಭಾವನೆ : ಹೊಸ ಆಲೋಚನೆ ; ಸಾಂಸ್ಕೃತಿಕ ಕ್ರಾಂತಿ! ಸಂಭ್ರಮವೇ ಸಂಭ್ರಮ

ಹೂವುಗಳನ್ನು ಮೆಚ್ಚುವುದು ಬೂರ್ಜ್ವಾ ಲಕ್ಷಣವೆಂದು ಮೊನ್ನೆ ತಾನೇ ತಿಳಿಯಿತು. ಆದ್ದರಿಂದ ಹೂವುಗಳ ಕುಲನಾಶವಾಗಲಿ. ಮುಳ್ಳುಗಳನ್ನೇ ಬೆಳೆಯಬೇಕೆಂದು ಮಾವೋ ಮಾವನ ಸಿದ್ಧಾಂತದಲ್ಲಿರಬೇಕೆಂದು ಕಾಣುತ್ತದೆ.

ರಿಕ್ಷಾಗಳನ್ನು ಬಳಸುವವರು ಚೀಣಾದಲ್ಲಿ ಹೊಸ ಕ್ರಮವನ್ನನುಸರಿಸಬೇಕು. ಯಾರು ಬೇಕಾದರೂ ರಿಕ್ಷಾದಲ್ಲಿ ಹೋಗಬಹುದು. ಆದರೆ ಪ್ರಯಾಣಿಸಬೇಕಾದವನು ತಾನೇ ರಿಕ್ಷಾವನ್ನೆಳೆಯಬೇಕು. ಅಂದರೆ ಚಾಲಕನಿಲ್ಲವೆ? ಇದಾನೆ...ಇದಾನೆ! ಆತ ಪ್ರಯಾಣಿಕರ ಪೀಠದಲ್ಲಿ ಹಾಯಾಗಿರುತ್ತಾನೆ. ದುಡ್ಡು ಮಾತ್ರ ತೆಗೆದುಕೊಳ್ಳುತ್ತಾನೆ. ಇದು ಅ—ಬೂರ್ಜ್ವಾ ವಿಧಾನ ಮಾವೋ ಚಿರಾಯುವಾಗಲಿ.

ಇದೇ ಸೂತ್ರವನ್ನು ಬಸ್ಸು ಕಾರು ಇತ್ಯಾದಿಗಳಿಗೆ ಅನ್ವಯಿಸಬಹುದೋ ಏನೋ. ಆದರೆ ಈ ವಿಷಯದಲ್ಲಿ ಮಾತ್ರ ನಾವು ಮಾವೋನಿಂದ ಹಿಂದೆ ಬಿದ್ದಿಲ್ಲ. ಬಸ್ಸು, ಟ್ಯಾಕ್ಸಿಗಳು ಕೆಟ್ಟಾಗ ಡ್ರೈವರನ್ನು ಒಳಗೆ ಕೂರಿಸಿ ಮೆಂತ್ಯದ ಹಿಟ್ಟು, ಐಸಾ, ಕಡಲೆಪುರಿ ಐಸಾ, ಎಂದು ತಳ್ಳಿಕೊಂಡು ಸಾಗುವ ಅನುಭವ ಲಾಗಾಯ್ತಿನಿಂದಲೂ ನಮಗೆ ಉಂಟು. ಬಸ್ಸು ನಡುದಾರಿಯಲ್ಲಿ ಕೆಟ್ಟಾಗ ಡ್ರೈವರ್ ಕ್ಲೀನರುಗಳು "ಇಳೀರಿ" ಎಂದು ಆದೇಶ ಕೊಡುವ ಮೊದಲೇ ನಾವು ಕೆಳಕ್ಕಿಳಿದು ಕಚ್ಚೆ ಕಟ್ಟುವ

ಧೀರರು ನಾವ್ಹ. ಮಾವೋ ಮಾಮ ಈ ವಿಷಯ ನಮ್ಮಿಂದಲೇ ಕಲಿತನೋ ಎಂಬ ಸಂಶಯವುಂಟು. ಇರಲಿ. ಇದು ಸಂಶೋಧಕರಿಗೆ ಸಂಬಂಧಿಸಿದ್ದು.

ಅಂತೂ ಮಾವೋ ಸೂತ್ರವನ್ನು ಯಥಾವತ್ತಾಗಿ ಅನ್ವಯಿಸುವುದಾದರೆ ನಾವು ಆಟೋರಿಕ್ಷಾ ಡ್ರೈವರುಗಳನ್ನು ಹಿಂದೇ ಕೂರಿಸಿಟ್ಟು ನಾವು ರಿಕ್ಷಾ ಬಿಡುವುದನ್ನು ಕಲಿಯಬೇಕಾಗುತ್ತದೆ. ಇನ್ನು ಜಟಕಾ ವಿಷಯದಲ್ಲಿ ಹೇಗೆ ? ಜಟಕಾ ಹೊಡೆಯುವ ಸಾಬಿಯನ್ನು ಮಾತ್ರ ಹಿಂದೆ ಕೂರಿಸಿ ನಾವು ಚಾವಟಿ ಹಿಡಿದು ತಟತಟಾಯಿಸಿಕೊಂಡು ಹೋದರೆ ಸಾಕೆ ? ಅಥವಾ ಕುದುರೆಯನ್ನೂ ಗಾಡಿಯೊಳಗೇ ತುರುಕಿ ಗಾಡಿಗೆ ಹೆಗಲು ಕೊಟ್ಟು ಎಳೆದುಕೊಂಡು ಹೋಗಬೇಕೆ ? ಈ ಸಮಸ್ಯೆಗೂ ಮಾವೋ ಕೃತಿಗಳಲ್ಲಿ ಪರಿಹಾರವಿರಬಹುದು.

ಅಂಬಿಗನಂತೂ ದೋಣಿ ಬಿಡಬೇಕಾಗಿಲ್ಲ. ಪ್ರಯಾಣಿಕರೇ ಸರದಿ ಪ್ರಕಾರ ಒಂದು ಕೈ ನೋಡುತ್ತಾರೆ. ದೋಣಿಯನ್ನು ಮುಂದಕ್ಕೋ ತಳಕ್ಕೋ ಬಿಟ್ಟುಬಿಡುತ್ತಾರೆ. ಇನ್ನು ರೈಲು, ಹಡಗು ವಿಮಾನಗಳಿಗೆ ಇದೇ ಸೂತ್ರವನ್ನು ಅನ್ವಯಿಸಿದರೆ ಹೇಗೆ ? ಆ ವಿವರವನ್ನು ಮಾವೋನ ಕೃತಿಗಳಲ್ಲಿ ಪಡೆಯಬಹುದು.

ಇದೇ ರೀತಿಯಲ್ಲಿ ಹೋಟಲಿಗೆ ಹೋಗಿ ಮಸಾಲೆ ಬರಲಿ. ಕಾಫಿ ಬರಲಿ ಎಂದು ಠೀವಿಯಿಂದ ಹೇಳುವ ಕಾಲ ಹೋಗಬಹುದು. ಒಳಹೊಕ್ಕೊಡನೆ ನೀವೇ ಸಪ್ಲೈ ಮಾಡಬೇಕು. ಸರ್ವರಿಗೆ ಎಂಬ ಕ್ರಮ ಜ್ಯಾರಿಗೆ ಬರಬಹುದು ಮಾವೋ ಮಾಮನ ಸಿದ್ಧಾಂತದ ಪ್ರಕಾರ. ಹಾಗೆಯೇ ಸೆಲೂನು ಹೊಕ್ಕರೆ ಮೊದಲು ಕ್ಷೌರಿಕನ ತಲೆ ಬೋಳಿಸಬೇಕಾಗುವುದೋ ಏನೋ . ಥೂ...ಥೂ...ಥೂ...ಯಾಕೋ ತಲೆ ಮೈ ಪರಚಿಕೊಳ್ಳೋಹಾಗಾಗುತ್ತದೆ.

ಇಲ್ಲ, ಹಾಗೇನೂ ಇಲ್ಲ. ಮಾವೋ ಸಿದ್ಧಾಂತ ಅನ್ವಯಿಸುವುದರಿಂದ ಎದುರಾಗುವ ಸಮಸ್ಯೆಗಳಿಗೆ ಮಾವೋ ಕೃತಿಗಳಲ್ಲಿಯೇ ಪರಿಹಾರ ಸಿಕ್ಕಿಯೇ ಸಿಗುತ್ತದೆ. ಅಂದಹಾಗೆ " ಸಿಗುತ್ತದೆ " ಏನು, " ಸಿಗಲೇಬೇಕು ". ಬೇಕಿದ್ದರೆ ಪೆಕಿಂಗಿನ ಕ್ಷೌರಿಕನನ್ನು ಕೇಳಿ, ಆತ ಮೊನ್ನೆ ಮೊನ್ನೆ ಹೇಳಿದಂತೆ. ಕ್ಷೌರ ಮಾಡುವಾಗ ಚಿಕ್ಕ ಮಕ್ಕಳು ಅಳುವುದು ಆತನಿಗೆ ಸಮಸ್ಯೆಯಾಗಿತ್ತಂತೆ. ಮಾವೋನ ಕೃತಿಗಳನ್ನು ಓದಿದಮೇಲೆ ಆ ಸಮಸ್ಯೆಯ ಅರ್ಥ ಸ್ಪಷ್ಟವಾಗಿ, ಬೆಳಕು ತೋರಿತಂತೆ. ಆತನಿಗೆ ಕಂಡ ಬೆಳಕು ನಮಗೂ ನಿಮಗೂ ಕಾಣಿಸದಿದ್ದೀತೆ ? ಆದ್ದರಿಂದ ಏನೇ ಬರಲಿ ಸರ್ವಬಲ್ಲ ಭಟ್ಟನಾದ ಮಾವೋ ಮಾಮನ ಕೃತಿಗಳನ್ನು ಮುಗುಚೋಣ.

—ರಾಮಿ

ಮ್ಯಾಜಿಸ್ಟ್ರೇಟರ ಕರುಣೆ

(ಬೇಂದ್ರೆಯವರ ಕರುಣೆ ಕೋರಿ)

ಕ್ರಿಮಿನಲ್ ನ್ಯಾಯದ ಪರಿಯೋ ಬೇರೆ ।
ಮ್ಯಾಜಿಸ್ಟ್ರೇಟರ ಕರುಣೆಯು ಹಿರಿದು ॥
ನಿಂತಿಹ ಫಿರ್ಯಾದಿಯ ನೋಡುವ ।
ಕನ್ನಡಕವ ಸೆಳೆದು ॥
ದೂರಿತ್ತವನನೆ ದಿಟ್ಟಿಸಿ ನೋಡುವ ।
ಅನುಮಾನದ ಗೆರೆ ಎಳೆದು ॥
ಪ್ರಾಸಿಕ್ಯೂಟರನು ಕೆರಳಿಸಿ ನೋಡುವ ।
ಅಪರಾಧದ ಬುಂಡ ಹಿಡಿದು ॥
ಎಲ್ಲ ಪುರಾವೆಯ ಪರಿಕಿಸಿ ನೋಡುವ ।
ಕಾನೂನಿನ ಎಳೆ ಹಿಡಿದು ॥
ಸಾಕ್ಷಿಗಳೆಲ್ಲರು ನುಡಿದುದ ಕೇಳುವ ।
ಎದೆಯಾಳವನಳೆದು ॥
ಸತ್ಯವ ಸಾರಲು ಪುಸ್ತಕ ತೆಗೆಯುವ ।
ವಕೀಲರ ನೆರಪಡೆದು ॥
ಅಟ್ಟಹಾಸದಲಿ ಶೋಧಿಸಿ ನೋಡುವ ।
ಅಪರಾಧದ ಬಗೆಬಗೆದು ॥
ಎವಿಡೆನ್ಸ್ ಅಕ್ಕಲಿ ಶೋಧಿಸಿ ನೋಡುವ ।
ಸುಳ್ಳಿನ ತೆರೆ ತೆಗೆದು ॥
ಅದಕೂ ಕುಗ್ಗದೆ " ಸಾಬೀತ್ " ಮಾಡಲು ।
ತೆರೆವನು ಹೃದಯವನು ॥
ಮ್ಯಾಜಿಸ್ಟ್ರೇಟರ ಕರುಣೆಯು ಕಡಲಿನ ।
ಆಳವನರಿತವರಾರು ? ॥

—ಹಾ. ರಾ.

ಕನ್ನಡಕ ತರಬೂರದಾಗಿತ್ತು, ಕವಿ

ಒಂದೇ, ಎರಡೇ, ಕವಿ ಬರೆವ ಪದ್ಯದ ಸಂಕಲನಗಳು ! ಇಪ್ಪತ್ತಕ್ಕೂ ಹೆಚ್ಚಾಗಿದ್ದುವು. ಶಾಲಾ ಬಾಲಕರು, ಕಾಲೇಜು ಹುಡುಗ ಹುಡುಗಿಯರು, ಮುದು ಕರು ಮುದುಕಿಯರು ಎಲ್ಲರೂ ಒಂದಲ್ಲ ಒಂದು, ಕವಿಯ ಗೀತವನ್ನು, ಪಲುಕುತ್ತಲೇ ಇದ್ದರು.

ಆಟೋರಿಕ್ಷಾ ಸಾರಥಿಗಳು, ಕವಿಯ ಗೀತವನ್ನು ಹಾಡಿದ ಕೂಡಲೇ ಆಟೋ ರಿಕ್ಷಾ ಫಟ್ ಫಟ್ ಅಂತ ಹೊರಡುತ್ತಿತ್ತು. ಜಟ್ಕಾ ಕುದುರೆಗಳನಕ ಕವಿಯ ಪದ್ಯ ವನ್ನು ಜಟ್ಕಾದವ ಗುನುಗಿದರೆ ಬಾಲ ಎತ್ತಿಕೊಂಡು ನಾಗಾಲೋಟ ಓಡುತ್ತಿದ್ದುವು.

ಅಷ್ಟು ಜನಪ್ರಿಯವಾಗಿದ್ದ ಕವಿ. ಅಷ್ಟು ದನ ಪ್ರಿಯವೂ ಆಗಿದ್ದ ಕವಿ. ಜನಪ್ರಿಯವಾಗುವ ಲಾಲಿತ್ಯ, ದನಪ್ರಿಯವಾಗುವ ಸಾಹಿತ್ಯ, ಎರಡನ್ನೂ ಮೇಳೈಸಿ ಕವನ ಕಟ್ಟುವ ಕವಿಯು ಇನ್ನೂ ೨೦ರ ಪ್ರಾಯದವ. ಒಂಟಿ ಸಲಗ,

ಕವಿಯ ಅಪ್ಪ ಅಮ್ಮ ಎಷ್ಟೆಷ್ಟೋ ಪ್ರಯತ್ನ ಪಟ್ಟಿದ್ದರು. ತಮ್ಮ ಏಕೈಕ ಕುಮಾರ ಕಂಠೀರವನಿಗೆ ಮದುವೆಮಾಡಬೇಕು ಅಂತ. ಆಸ್ತಿಪಾಸ್ತಿ ಇದ್ದವರು, ದಿಟ ಹುಡುಗ ಹೆಸರುಗಳಿಸಿದ ಸಾಹಿತಿ, ದಿಟ. ಆದರೆ, ಆದರೆ, ೨ ತಿಂಗಳು ಗರ್ಭದಲ್ಲಿ ದ್ದಾಗಲೇ ಹುಡುಗ ಸೂರ್ಯ ಗ್ರಹಣವನ್ನು ಗ್ರಹಿಸಿಬಿಟ್ಟಿದ್ದ. ಹುಟ್ಟಿದಾಗ ಮುಖ ಒಂದು ತರಹಾ ಇತ್ತು. ಬೆಳೀತಾ ಬೆಳೀತಾ ಒಂದೊಂದು ಅವಯವವೂ ಒಂದೊಂದು ತರಹ ಬೆಳೆಯುತ್ತಾ ಬಂತು. ಹಾಗಾಗಿ ಹಲವಾರು ಜನರ ಕೆಲ ಕೆಲವು ಅವಯವ ಗಳನ್ನು ಕೂಡಿಸಿ ತೇಪೆ ಹಾಕಿದಂತಿದ್ದ ಈ ವಕ್ರತುಂಡ. ಆ ಕಾರಣದಿಂದಲೇ ಏನೋ ಅವನ ಗೀತಗಳು ಕೂಡ ದನ, ಜನ ಪ್ರಿಯವಾದುವು.

ತಂದೆ ತಾಯಿಯರಿಗೆ ಹೆತ್ತ ಮಗ ಮುದ್ದಲ್ಲವೇ ? ಮನೆಗೆ ಸೊಸೆಯನ್ನು ಬರಮಾಡಿಕೊಳ್ಳಬೇಕು ಅಂತ ಪದ್ಯಾಡಿದರು. ತಿರುಪತಿ ದೇವರಿಗೆ ಹರಸಿಕೊಂಡರು ಮದುವೆ ಆದರೆ, ಭಟ್ಟತಲೆಯ ಮಗನ ಇದ್ದು ಬದ್ದ ಜುಟ್ಟನ್ನು ಬಿಡಿಸುತ್ತೇವೆ ಅಂತ. ಊರ ಮಾರಮ್ಮನಿಗೂ ಬಲಿ ಕೊಡ್ತೀವಿ ಅಂತ ಮುಡುಪು ಕಟ್ಟಿದರು.

ಆದರೂ ಈ ಹುಡುಗ ಕವಿಗೆ ಯಾವ ಹುಡುಗಿಯೂ ಬಲಿಯಾಗಲೇ ಇಲ್ಲ.

ಗತ್ತಾ ಗತ್ತಾ ಹೆಬ್ಬಿಗುಬ್ಬಾಲೆಯಲ್ಲಿ ಮದುವೆಗೆ ನೆರೆದ ಹೆಣ್ಣು ಇದೆ ಎಂದು ಕವಿಯ ಸೋದರಮಾವ. ಭಾವನಿಗೆ ಕಾಗದ ಹಾಕಿಸಿದ. ತಂದೆ ಹೆಬ್ಬಿಗುಬ್ಬಾಲೆಗೆ ಓಡಿದ. ಕಾಳಂಭಟ್ಟರು ಅಂತ ಊರ ಜೋಯಿಸರು. ಅವರ ಮಗಳಿಗೆ ಆಗಲೇ ೨೩ರ ಪ್ರಾಯ ಮಿಂಚಿತ್ತು, ಅಂತಹ ಹೆಸರಿನ ಅಪ್ಪ ಇದ್ದರೂ ಮಗಳು ಕೆಂಚಗೆ ಲಕ್ಷಣವಾಗಿ ತುಂಬಿಕೊಂಡಿದ್ದಳು. "ಇಷ್ಟು ಚೆಲುವೆ ಹುಡುಗಿ ನನ್ನ ಮಗನ ಕೈ ಹಿಡೀತಾಳೆಯೋ ಎಂದು ಅನುಮಾನವೇನೋ ಬಂತು. ಆದರೂ ಇಷ್ಟು ವಯ ಸ್ಸಾದರೂ ಇನ್ನೂ ಬರೀ ಕತ್ತಿನಲ್ಲಿದ್ದಾಳೆ. ಕೇಳಿ ನೋಡೋಣ ಅಂತ ಅಂದುಕೊಂಡು

ಸೋದರಮಾವನ ಮುಖಾಂತರ ಮಾತು ಕತೆಗೆ ಶುರು ಮಾಡಿದರು. ಕಾಳಂಭಟ್ಟರನಕ ದೈವೇಚ್ಛೆ ಇದ್ದಂತೆ ಅಂದರು. ಆದರೆ ಹುಡುಗಿಯಂತೆ ಚೆಲುವಾಗಿದ್ದ ಕಾಳಂಭಟ್ಟರ ಹೆಂಡತಿಯೂ, ಹುಡುಗ ಹುಡುಗಿ ನೋಡಿ ಒಪ್ಪಿದರೆ, ಓಲಗ ಊದಿಸೋಣ ಅಂತ ಆಸೆ ಹುಟ್ಟಿಸಿದರು.

ಹುಡುಗ ಯಾವ ಹುಡುಗಿಯನ್ನಾದರೂ ಒಪ್ಪುತ್ತಾನೆ ಎನ್ನುವ ಭರವಸೆ ತಂದೆಗಿತ್ತು. ಆದುದರಿಂದಲೇ ಆದಷ್ಟು ಬೇಗ ಸಂಸಾರ ಸಮೇತ ಹುಡುಗಿಯನ್ನು ನೋಡಲು ಬಂದರು.

ಹುಡುಗಿಗೋ ಬಲು ನಾಚಿಕೆ, ನಿಂತಲ್ಲೇ ಕೂತಲ್ಲೇ ಬಳುಕುತ್ತ ಕೆಂಪೇರು ತ್ತಿದ್ದಳು, ಆಗಬಹುದು ಅಂತ ಒಪ್ಪಿಯೂ ಬಿಟ್ಟಳು. ಮದುವೆಯೂ ಆಗಿ ಹೋಯಿತು.

"ಎಷ್ಟು ಆದರದ ಹುಡುಗಿ" ಅಂತ. ಗಂಡನ ಕೈ ಹಿಡಿದವಳು, ಗಂಡನ ನೆರಳಿನಂತೆಯೇ ಓಡಾಡುತ್ತಿದ್ದಳು. ಮೊದಲ ಮೂರು ರಾತ್ರಿಯೂ ಕವಿ ಪದ್ಯ ಗಳನ್ನು ಹಾಡಿದ್ದೂ ಹಾಡಿದ್ದೇ. ನವ ವಧು ಕೇಳಿ ಕೇಕೆ ಹಾಕಿದ್ದೂ ಹಾಕಿದ್ದೇ.

"ಈ ಪುಸ್ತಕ ಓದಿಕೊಂಡು ನೀನೇ ಹಾಡು" ಎಂದ ಗಂಡ.

ಪುಸ್ತಕ ತೆಗೆದು ಕೊಂಡಳು ಹೆಂಡತಿ. ತಲೆಕೆಳಗಾಗಿ ಹಿಡಿದುಕೊಂಡಳು, ಸರಿಯಾಗಿ ಕಾಣಿಸಲ್ಲವಲ್ಲ, "ಕಾಮೇಶ್ವರ" ಅಂದಳು.

ಹೆಂಡತಿಗೆ ಕಣ್ಣು ಕಾಣಿಸುಲ್ಲ ಅಂತ ಗಂಡನಿಗೆ ಗೊತ್ತಾಯ್ತು, ಆದರೇನಂತೆ. "ಕಣ್ಣುಕಾಣಿಸದೆ ಇದ್ದರೆ, ಕನ್ನಡಕ ಹಾಕಿಕೊಂಡರಾಯಿತು. ಕಾಮೇಶ್ವರಿ, ಅದಕ್ಕೇಕೆ ಚಿಂತೆ. ನಾಳೆ ಬೆಳಿಗ್ಗೆಯೇ ಕಣ್ಣಾಸ್ಪತ್ರೆಗೆ ಹೋಗೋಣ" ಎಂದ ಗಂಡ,

ಮಾರನೆಯ ದಿನದಿಂದ ಕಣ್ಣಾಸ್ಪತ್ರೆಗೆ ದಂಪತಿಗಳ ಯಾತ್ರೆ ಪ್ರಾರಂಭವಾಯಿತು. ಮೂರುದಿನ ಕಣ್ಣು ಡಾಕ್ಟರು ವಿಧ ವಿಧ ಪರೀಕ್ಷೆ ಮಾಡಿ ಕಡೆಗೆ ಒಂದು ಜತೆ ಲೆನ್ಸ್ ಗಳನ್ನು ಸಿದ್ಧಪಡಿಸಿದರು. ಅದನ್ನು ಧರಿಸಿ ನೋಡಿದಾಗ ಪರೀಕ್ಷಾ ಚಾರ್ಟಿನ ಮೊದಲ ನಾಲ್ಕು ಪಂಕ್ತಿಗಳನ್ನು ಸುಲಭವಾಗಿ ಓದಿದಳು.

ಆ ಪ್ರಿಸ್ಕ್ರಿಪ್ಷನ್ ತೆಗೆದುಕೊಂಡು ಗಂಡ ಕನ್ನಡಕದ ಅಂಗಡಿಗೆ ಹೋಗಿ ಕೊಟ್ಟು ಮಾರನೆದಿನ ಕನ್ನಡಕದ ಪೆಟ್ಟಿಗೆಯನ್ನು ಹಿಡಿದುಕೊಂಡು ಮನೆಗೆ ಚಿಮ್ಮುತ್ತಾ ಬಂದ.

"ಇದನ್ನು ಹಾಕಿಕೊಂಡು, ನೋಡೇ, ನನ್ನ ಹೃದಯೇಶ್ವರಿ" ಅಂದ. ಕನ್ನಡಕ ವನ್ನು ಹಾಕಿಕೊಂಡಳು, ಹೃದಯೇಶ್ವರಿ. ನೋಡಿದಳು. ನೋಡಿ ಭಯದಿಂದ ಚೀರಿದಳು.

"ಇದೇನೇ, ನನ್ನ ಗಂಡ" ಅಂತ ಬಸವಳಿದು ಬಿದ್ದಳು.

ಕನ್ನಡಕ ತರಬಾರದಾಗಿತ್ತು, ಕವಿ.

—ಬಚ್ಚ

ಯೂನಿಟಿ ಇನ್ ಡೈವರ್ಸಿಟಿ

ನಾನು ಮತ್ತು ರಾಯರು ಮಿತ್ರರು. ನಮ್ಮ ಅಭಿರುಚಿ ಮತ್ತು ಅಂತಸ್ತು ಗಳಲ್ಲಿ ಗಮನಾರ್ಹ ಅ-ಸಮತೆಗಳಿದ್ದರೂ ಮಿತ್ರತ್ವ ಉಳಿದಿದೆ.

ರಾಯರು ಸ್ವಂತ ಮನೆಯುಳ್ಳವರು. ಮನೆಯಲ್ಲಿ ಒಬ್ಬಳು ಮಡದಿ, ಇಬ್ಬರು ಮಕ್ಕಳಿದ್ದಾರೆ. "ಊಟಕ್ಕಾಯಿತು" ಎಂಬ ಮಧುರ ಸಂಜ್ಞೆ ಸಿಕ್ಕಿದಾಗ ರಾಯರು ಕೋಟು, ಷರ್ಟು ತೆಗೆದಿಟ್ಟು, ಅಡುಗೆ ಮನೆಯತ್ತ ನಿಧಾನವಾಗಿ ಹೆಜ್ಜೆ ಹಾಕುತ್ತಾರೆ. ರಾಯರು ಗೃಹಸ್ಥರು.

ನಾನು ರೂಮಸ್ಥ. ತಿಂಗಳ ಬಾಡಿಗೆ ಇಪ್ಪತ್ತೈದು. ರೂಮಿನಲ್ಲಿ ಮಂಚವಿದೆ ; ಕುರ್ಚಿಯಿದೆ ; ಮೇಜೊಂದಿದೆ. (ಸಂದು ಸಂದುಗಳಲ್ಲಿ ಅಗಣಿತ ತಗಣೆ ಸಂಸಾರಗಳಿವೆ.) ಊಟದ ಹೊತ್ತಿಗೆ ವಸ್ತ್ರಾಲಂಕೃತನಾಗಿ, ಚಪ್ಪಲಿ ಮೆಟ್ಟಿ, ರೂಮಿನಿಂದ ಹೊರಗೆ ಹೋಗುತ್ತೇನೆ-ಹೊಟೆಲಭಿಮುಖವಾಗಿ ! (ರಾಯರು ಗೃಹಸ್ತ ; ನಾನು ರೂಮಸ್ಥ !)

ರಾಯರ ನಡಿಗೆ, ವ್ಯವಹಾರ ಠಾಕು–ಠೀಕು. ಡೌಲಿನ ರೀತಿ ನೀತಿ. ಅಮೇರಿಕನ್ ಡಾಲರ್ ಇದ್ದಹಾಗೆ !

ನನ್ನದು—ಮೈ ಬಗ್ಗಿಸಿ, ತಲೆ ತಗ್ಗಿಸಿ ಹೊಂದಿಕೊಳ್ಳುವ ಹವ್ಯಾಸ ; ಭಾರತೀಯ ರೂಪಾಯಿಯ ಹಾಗೆ !

ಇಂದ್ರಭವನದಲಿ ಚಂದ್ರ ಮೂಡಿತೋ
ದೋಸೆ ಹೆಂಚಿನಲ್ಲಿ
ಮೂಡಿತೆಂಬೆಯ ಮತ್ತೆ ಮುಳುಗಿತೋ
ಉದರ ಗಗನದಲ್ಲಿ !

ಈ ಕವಿತೆಯನ್ನು ಕೊರೆದ ಕನ್ನಡದ ಶ್ರೀ ದಿಬ್ಬಯ್ಯನವರು ನನ್ನ ಮೆಚ್ಚಿನ ಕವಿ

"ಪೆರಿಮಾಸನ್" ಸೀರೀಸ್ ಕಾದಂಬರಿಗಳೆಂದರೆ ರಾಯರಿಗೆ ಇಷ್ಟ..... Black eyed blonde ಒಂದು ಉಚ್ಚ ಕೃತಿಯೆಂದು ರಾಯರ ಅಂಬೋಣ.

ರಾಯರು ನನಗಿಂತ ಹಿರಿಯರು. ರಾಯರ ತಲೆಗೆ ಕನ್ನಡಿಯ ಹೊಳಪು. ನಾನು ಕಿರಿಯ. ತಲೆಯಲ್ಲಿ ಕೂದಲಿದೆ. ಆದರೆ ನನ್ನ ತಲೆಯಿಂದ ಯಾರಿಗೂ ಪ್ರಯೋಜನವಾದದ್ದಿಲ್ಲ. ರಾಯರ ಬೊಕ್ಕ ತಲೆಯಿಂದಾದ ಪ್ರಯೋಜನ !

ಒಂದು ಸಾರಿ ಹೀಗಾಯಿತು,

ರಾಯರ ಮುದ್ದಿನ ಮಂಗಳಾ ಶಾಲೆಗೆ ಹೊರಡುವ ಸಿದ್ಧತೆಯಲ್ಲಿದ್ದಳು. ಮುಖಕ್ಕೆ ಪೌಡರು ಬಳಿದುಕೊಳ್ಳುವ ಭರದಲ್ಲಿ ಕೈಯಲ್ಲಿದ್ದ ಕನ್ನಡಿ ಬಿದ್ದು ನುಚ್ಚು ನೂರಾಯಿತು. ರಾಯರ ಹೊಳೆಯುವ ಬೊಕ್ಕ ತಲೆಯನ್ನು ಕಂಡ ಆ ಮುದ್ದಿನ ಮಂಗಳೆಗೆ ಸಟಕ್ಕನೆ ಉಪಾಯವೊಂದು ಹೊಳೆಯಿತು. ಇಪ್ಪತ್ತನೆ ಶತಮಾನದ ಉತ್ತರಾರ್ಧದಲ್ಲಿ ಬೆಳೆಯುತ್ತಿರುವ ಕುಮಾರಿಯಲ್ಲವೆ ? ಪೌಡರು ಬಳಿದುಕೊಂಡು, ಲಿಪ್‌ಸ್ಟಿಕ್ ಹಚ್ಚಿ ಹೊರಟೇಬಿಟ್ಟಳು ನಾರೀಮಣಿ. ರಾಯರ ತಲೆಯಿರಲು ಬೇರೆ ಕನ್ನಡಿ ಬೇಕೆ ?

ರಾಯರು ಮಾತುಗಾರರು. ದೇಶದೊಳಗಿನ ಸುದ್ದಿ ಅವರಿಗೆ ಹಿಡಿಸದು. ಅವರ ಅಭಿರುಚಿ ವಿದೇಶ ವ್ಯವಹಾರಗಳಲ್ಲಿ. (ಲಿಂಡನ್ ಜಾನ್ಸನ್ನರಿಗೆ ನೆಗಡಿಯಾದಾಗ ರಾಯರಿಗಾದ "ತಲೆ ಬಿಸಿ" ಅಷ್ಟಿಷ್ಟಲ್ಲ.)

ನನ್ನದು ಹೂಗುಟ್ಟುವ ಸ್ವಭಾವ. ನನ್ನ ಈ ಧೋರಣೆ ನಮ್ಮಿಬ್ಬರ ಮಿತ್ರತ್ವಕ್ಕೆ ಅಡಿಗಲ್ಲಾಗಿರಬಹುದೇ ಎಂಬ ಸಂಶಯ ನನಗೀಗ ಬರಹತ್ತಿದೆ.

ವಿಯೆಟ್‌ನಾಮ್‌ನಲ್ಲಿ ಅಮೆರಿಕದ "ಸ್ಕೈಹಾಕ್ಸ್" ನಾಶವಾದ ಬಗ್ಗೆ, "ಥಂಡರ್‌ಬರ್ಡ್ಸ್" ಧ್ವಂಸಗೊಳಿಸಿದ ರೀತಿ, ವಿಯೆಟ್‌ಕಾಂಗ್‌ಗಳ ಚಾಕಚಕ್ಯತೆ, ಅಮೆರಿಕದ ವಾಯುಪಡೆ ಕಂಡು ಹಿಡಿದ F. A. C. ಯುದ್ಧ ತಂತ್ರ—ಇತ್ಯಾದಿ ಲೆಕ್ಚರುಗಳಿಗೆ ನಾನು ಹೂಗುಟ್ಟುತ್ತೇನೆ.

ಬರ್ಮಿಂಗ್‌ಹ್ಯಾಮಿನ ಕಾರಕಾನೆಯೊಂದರ ಯುವಕರು, ಸ್ತ್ರೀಯರ ಮುಂದೆ ಬಟ್ಟೆ ಬದಲಾಯಿಸಬೇಕಾಗುತ್ತದೆ ಎಂಬ ಕಾರಣಕ್ಕಾಗಿ ಹೂಡಿದ ಮುಷ್ಕರದ ಬಗ್ಗೆ ಅವರು ಹೇಳಿದಾಗ ನಾನು ಹೂಗುಟ್ಟಿ, ಮುಖನೋಡಿ ನಕ್ಕದ್ದುಂಟು.

ಯಾರಿಗೂ ಅಗತ್ಯವಿಲ್ಲದ ವಿಷಯಗಳ ಬಗ್ಗೆ ಮಾತನಾಡುವವನಿಗೆ ಮಾತಿಲ್ಲದೆ ಕಿವಿಕೊಡುವವನ ಗೆಳೆತನ ಬೇಡವಾದೀತೆ ?

ನಾವೀಗ ಹಳೆಯ ಗೆಳೆಯರು.

ನಮ್ಮ ಗೆಳೆತನ unity in diversity ಗೆ ಒಂದು ಉದಾಹರಣೆಯಾದೀತೆ?

—ಕಿರಣ ಗುಲ್ಲೂರು

ನವುರು ಮಲ್ಲಿನ ಪಂಚೆ, ಮೇಲೆ ರೇಷಿಮೆ ಅಂಗಿ.
ಕೊರಳಿನಲ್ಲಿ ರುದ್ರಾಕ್ಷಿ—ವೈರಾಗ್ಯ ಭಂಗಿ ;
ಮನೆ ತುಂಬ ನಗನಾಣ್ಯ, ಭದ್ರ ತ್ರಿಜೋರಿ,
ಇಸಪೀಟಿನಲಿ ಮಾತ್ರ ರಂಗು ಚೋರಿ.

—ನಿಶಾಚರ

ಅರವತ್ತ್ಮೂರರ ಗೌರಿ

ಈ ವರ್ಷ ಗೌರೀನ ನಮ್ಮ ಮನೇಲಿ ಇಡ್ತೀವಿ ಎಲ್ರೂ ಗೌರೀ ಪೂಜೇಗೆ ನಮ್ಮ ಮನೇಗೇ ಬಂದುಬಿಡಿ ಅಂತ ಡಾಕ್ಟರ್ ಮೀನಾಕ್ಷಿ ಆಸ್ಪತ್ರೀಲಿ ಮೊಟ್ಟ ಮೊದಲು ಬಾರಿಗೆ ಹೇಳಿದ್ದು ಮೈ ತೋರಿಸಿಕೊಂಡು ಹೋಗಲು ಬಂದಿದ್ದ ಕಾಮಾಕ್ಷೀಗೆ. ಕಾಮಾಕ್ಷೀಗೆ ಮಾತ್ರ ಅಂತ ಡಾಕ್ಟರು ಗುಟ್ಟಾಗಿ ಏನೂ ಹೇಳಲಿಲ್ಲ. ಸುಬ್ಬಲಕ್ಷ್ಮೀಗೂ ಕೇಳಿಸಿತು. ಮೊರದಗಲದ ಕಿವಿಗಳು ಅವಳದ್ದು. "ಹಾಗೇ ಡಾಕ್ಟರೆ, ಬಂದೇ ಬಿಡ್ತೀನಿ" ಅಂತ ಸುಬ್ಬಲಕ್ಷ್ಮಿ ಕೆನೆದು ಹೇಳಿದಾಗ ಅವಳ ದುಂಡು ಮುಖದ ದುಂಡು ಕೆನ್ನೆಗಳಲ್ಲಿ ಗುಳಿ ಬಿದ್ದಿದ್ದು ಡಾಕ್ಟರಿಗೆ ಕಾಣಿಸಿತು, ಅದೃಷ್ಟಶಾಲಿ ಕಣೆ, ಸುಬ್ಬಲಕ್ಷ್ಮೀ, ಆರನೇದಲ್ವೇನೆ ಈ ಸರ್ತಿ ಎಂದು ಹೇಳಿದಾಗ ಸುಬ್ಬಲಕ್ಷ್ಮೀ ತಲೆ ತಗ್ಗಿಸಿದಳು. ಖಂಡಿತ ಗೌರಿ ಪೂಜೇಗೆ ಈ ವರ್ಷ ನಮ್ಮ ಮನೇಗೆ ಬರಬೇಕು ಅಂತ ಡಾಕ್ಟರು ಮತ್ತೊಮ್ಮೆ ಹೇಳಿದಾಗ ಸುಬ್ಬಲಕ್ಷ್ಮೀಗೆ ಆಶ್ಚರ್ಯಾನೇ ಆಯ್ತು! ಕಾಮಾಕ್ಷಿ ಕಿವಿಮೇಲೆ ಬಿದ್ದ ಸುದ್ದೀಗೆ ಏನು ಗತಿ ಬರುತ್ತೆ ಅಂತ ನಾನು ಹೇಳಬೇಕೇನು? ರಕ್ತಬೀಜಾಸುರ ಎನ್ನುವ ಹೆಸರಿದ್ದ ರಾಕ್ಷಸನೊಬ್ಬನಿರಲಿಲ್ಲವೆ ದೇವತೆಗಳ ಕಾಲದಲ್ಲಿ? ಅವನ ಮೈಮೇಲಿನ ರಕ್ತದಬಿಂದು ಕೆಳಕ್ಕೆ ಬಿದ್ದರೆ ಸಾವಿರ ಜನ ರಾಕ್ಷಸರು ಹುಟ್ಟಿ ಬರುತ್ತಿದ್ದರಂತಲ್ಲ! ಹಾಗೆ ಸುದ್ದಿಗರಿಕಟ್ಟಿಕೊಂಡು ಸಾವಿರ ಕಿವಿಗಳನ್ನು ಮುಟ್ಟಿತು ಸಾವಿರ ಬೇಡೋಲೆಗಳನ್ನು ದಾಟಿಕೊಂಡು! ಊಹಾಪೋಹಗಳಿಗೆ ಅವಕಾಶವಿಲ್ಲದಂತೆ ಡಾ॥ ಮೀನಾಕ್ಷಿ ಊರಿನ ಮಹಿಳಾ ಸಮಾಜಕ್ಕೆ ಒಂದು ಪ್ರಕಟಣೆಯನ್ನೂ ಕಳಿಸಿಬಿಟ್ಟಿದ್ದರು. ಆಸ್ಪತ್ರೆಯಲ್ಲಿ ಗುರುತಿದ್ದ ಒಬ್ಬರಿಬ್ಬರು ಪೇಷಂಟ್‌ಗಳಿಗೆ ಸ್ವತಹ ಡಾಕ್ಟರೇ 'ಈ ವರ್ಷ ಗೌರೀ ಹಬ್ಬಕ್ಕೆ ಇಲ್ಲೀಗೇ ಬಂದುಬಿಡಿ' ಅಂತ ಬಾಯಿ ತಪ್ಪಿ ಅಂದಾಗ ಅವರು ಒಂದೇ ದಿನದಲ್ಲಿ ಗುಣಮುಖರಾಗಿ ವಾರ್ಡ್ ಖಾಲಿ ಮಾಡಿ ಹೊರಟಿದ್ದೂ ಉಂಟು. ಈ ಸುದ್ದಿ ಆಸ್ಪತ್ರೆಯಲ್ಲೆಲ್ಲ ಹರಡಿ ನರ್ಸುಗಳಿಗೆಲ್ಲಾ ನಗು ಬಂತು. ಗಂಡು ಡಾಕ್ಟರುಗಳೆಲ್ಲ 'ಇದೇನು ಹುಚ್ಚು ಮೀನಾಕ್ಷೀಗೆ' ಅಂತ ಅಂದುಕೊಂಡರು! ಗಂಡು ಡಾಕ್ಟರುಗಳಿಗೇನು ಗೊತ್ತಾಗುತ್ತೆ ಹೆಣ್ಣು ಡಾಕ್ಟರ ಗೌರಿ ಪೂಜೆಯು ವೈಖರಿ! ಮದುವೆ ಇಲ್ಲ, ಮಕ್ಕಳಿಲ್ಲ ಈ ಇಳಿ ವಯಸ್ಸಿನಲ್ಲಿ ಎಲ್ಲಾ ಮುಗಿದಮೇಲೆ ಪೂಜೆ ವ್ರತಗಳು ಬೇಕೇನೋ ಅಂತ ಹೆಡ್ ನರ್ಸ್ ಎಲಿಸಿಬತ್‌ಯಮ್ಮ ಲೇಬರ್ ವಾರ್ಡಿನಲ್ಲೇ ಗೊಣಗುಟ್ಟುತ್ತ ಕುಳಿತುಕೊಂಡಳು. ಅಲ್ಲಿಯರಾಗಕ್ಕೆ ಅನುಕಂಪಸೂಸುತ್ತ! ಆದರೂ ಭಯ! ಸಹಾನುಭೂತಿಯನ್ನು ಬೆಳೆದ ಹುಡಿಗಿ ಆಗುತ್ತಲೇ ಕೋರಿದ್ದಳು!

ಮೊದಮೊದಲು ನರ್ಸುಗಳೂ ಇದನ್ನು ನಂಬಲೇ ಇಲ್ಲ. ಆದರೆ ಡಾಕ್ಟರ್ ಮೀನಾಕ್ಷಿ ಹೆಂಗಸರಿಗೆ ಪ್ರಿಸ್ಕ್ರಿಪ್ಷನ್ ಬರೆದುಕೊಡುವಾಗಲೆಲ್ಲ ಗೌರಿ ಹಬ್ಬಕ್ಕೆ ಆಮಂತ್ರಣ ನೀಡುತ್ತಿದ್ದುದನ್ನು ಕೇಳಿದಾಗ ಅವರಿಗೆ ತಲೆ ಗಿರ್ರನೆ ತಿರಿಗಿ ಅವರ ದೇಹ ಸ್ಥಿತಿ ಬಗ್ಗೆ ಅವರಿಗೆ ಅನುಮಾನ ಬರುವ ಹಾಗಾಗುತ್ತಿತ್ತು. ಒಂದು ದಿವಸ 500 ಜೊತೆ ಮರಗಳಿಗೆ ಡಾಕ್ಟರು ಆರ್ಡರ್ ಕೊಟ್ಟಾಗ ಇದು ಯಾವ ಆಪರೇಷನ್ನಿಗೆ ಅಸ್ತ್ರವೋ ತಿಳಿಯದೆ ಅವರೆಲ್ಲ ಕಂಗಾಲಾದರು !

ಗೌರಿ ಹಬ್ಬ ಇನ್ನು ಒಂದುವಾರ ಇರುವ ಹಾಗೇ ಊರಿನ ಮಹಿಳೆಯರಿಗೆಲ್ಲ ಡಾ॥ ಮೀನಾಕ್ಷಿಯಿಂದ ಆಹ್ವಾನ ಪತ್ರಗಳು ಬಂದವು. ಗೌರಿ ಪೂಜೆಗೆ ಎಲ್ಲರೂ ತಮ್ಮ ಮನೆಗೆ ಬರಬೇಕೆಂದು ವಿಧಿವತ್ತಾಗಿ ವ್ರತವು ಆಚರಿಸಲ್ಪಡುವುದೆಂದೂ ಆಹ್ವಾನ ಪತ್ರಿಕೆಯಲ್ಲಿ ಅಚ್ಚಾಗಿತ್ತು. ಹೆಂಗೆಳೆಯರಿಗೆಲ್ಲ ಒಂದುಕಡೆ ಸಂತೋಷ ಇನ್ನೊಂದು ಕಡೆ ಆಶ್ಚರ್ಯ. ಡಾಕ್ಟರಮ್ಮ ಎಲ್ಲರಿಗೂ ಬೇಕಾದವಳು ಮದುವೆಯಲ್ಲ ನಾಮಕರಣವಲ್ಲ. ಗೌರಿ ವ್ರತ, ಹೋಗದೆ ಉಂಟೆ ? ಎಂದುಕೊಂಡರು ಎಲ್ಲರೂ.

*   *   *   *

ಆಚೆ ಬೀದಿ ಸುಬ್ಬಾಭಟ್ಟರ ಮನೆಯಲ್ಲಿ, ಕೆರೆ ಬೀದಿ ಗಂಗಾಧರ ಶಾಸ್ತ್ರಿಗಳ ಮನೆಯಲ್ಲಿ ಗೌರಿ ಇಟ್ಟು ಊರಿನ ಮಹಿಳೆಯರೆಲ್ಲ ಗೌರಿ ಪೂಜೆ ಮಾಡುವುದು ಊರಿನ ಪದ್ಧತಿ. ಸುಬ್ಬಾಭಟ್ಟರ ಮನೆಯಲ್ಲಿ ಅರ್ಧಜನ ಗೌರಿ ಪೂಜೇಗೆ ಹೋಗು ತ್ತಿದ್ದರು. ಸುಬ್ಬಾಭಟ್ಟರಿಗೆ ಸಾಕಾದಷ್ಟು ಸಂಪಾದನೆ ಸಿಗುತ್ತಿತ್ತು. ಮನೆ ಒಡತಿಗೂ ಬಾಗಿನ ರವಿಕೆ ಕಣ ದಕ್ಷಿಣೆ ಸಿಗುತ್ತಿತ್ತು. ಕೆರೆ ಬೀದಿ ಗಂಗಾಧರ ಶಾಸ್ತ್ರಿಗಳ ಮನೇಗೆ ಎಲ್ಲಾ ಮತದವರೂ ಪೂಜೇಗೆ ಹೋಗುತ್ತಿದ್ದರು, ಹೀಗಾಗಿ ಶ್ರೀಮಂತ ಮಹಿಳೆಯರು ಅಲ್ಲಿಗೆ ಪೂಜೆಗೆ ಹೋಗುತ್ತಿದ್ದುದರಿಂದ ಶಾಸ್ತ್ರಿಗಳ ಹೆಂಡತಿಗೆ ಜರಿ ಅಂಚಿನ ಕುಪ್ಪಸದ ಬಟ್ಟೆಗಳೇ ಸಿಗುತ್ತಿತ್ತು.

ಮೀನಾಕ್ಷಿ ಡಾಕ್ಟರ ಮನೆಯಲ್ಲಿ ಗೌರಿ ಇಡುವ ಸುದ್ದಿ ಸ್ವತಹ ಡಾಕ್ಟರೇ ಖುದ್ದು ವ್ಯವಸ್ಥೆ ಮಾಡಿರುವ ವಿಷಯ ಭಟ್ಟರು ಮತ್ತು ಶಾಸ್ತ್ರಿಗಳ ಕಿವಿಗಳಿಗೆ ಬಿತ್ತು. "ಎಲ್ಲಾದರೂ ಉಂಟೆ, ಇದು ಸಂಪ್ರದಾಯಕ್ಕೆ ವಿರುದ್ಧ ಡಾಕ್ಟರು ಇವತ್ತು ಈ ಊರು ನಾಳೆ ಇನ್ನೊಂದು ಊರು. ಪದ್ಧತಿ ಇಲ್ಲದೆ ಗೌರಿ ಇಟ್ಟರೆ ಮನೆ ಹಾಳಾ ಗುತ್ತೆ. ಡಾಕ್ಟರಮ್ಮಂಗೆ ಯಾರು ಏನು ಹೇಳಿದರೋ ಏನೋ ?" ಅಂತ ಭಟ್ಟರು ಒಂದು ಬಾಣವನ್ನು ಬಿಟ್ಟರು.

"ಮೀನಾಕ್ಷೀಗೆ ಗ್ರಹಗತಿ ಚೆನ್ನಾಗಿಲ್ಲ ಅಂತ ಕಾಣುತ್ತೆ. ಕಳೆದವರ್ಷವೇ ವರ್ಗ ಆಗಿತ್ತು, ಒಳ್ಳೆ ಹಸ್ತಗುಣ ಇರುವ ಡಾಕ್ಟರು ಅಂತ ನಾವೆಲ್ಲ ಹೊಗಳಿ ಇಲ್ಲಿಯೇ ಇರಬೇಕು ಅಂತ ಮೇಲಧಿಕಾರಿಗಳಿಗೆ ಅರ್ಜಿ ಬರೆದು ಹಾಕಿದ್ದಕ್ಕೆ ಇದೇನೇ ಪ್ರತಿಫಲ,

ಡಾಕ್ಟರ ಜಾತಕ ನಾನೂ ನೋಡಿದ್ದೇನೆ. ಯಾವುದೋ ಮಗುವನ್ನು ಕಳದುಕೊಂಡ ಬಾಣಂತಿ ಡಾಕ್ಟರಿಗೆ ಈ ಗೌರಿ ಹುಚ್ಚು ಹುಟ್ಟಿಸಿರಬೇಕು. ಇದು ಹೋಗಬೇಕಾದರೆ ಮಾಟಮಾಡಬೇಕಾಗುತ್ತೆ" ಅಂತ ಶಾಸ್ತ್ರಿಗಳು ಮಗಳ ಮುಂದೆ ಸಂಜೆ ಸುಮಾರಿನಲ್ಲಿ ಅಂದಾಗ ಆರನೆ ಹೆರಿಗೆಗೆ ತೌರಿಗೆ ಬಂದಿದ್ದ ಆಕೆ ಸೆರಗನ್ನು ಹಾರಿಸಿ ತಂದೆಮೇಲೆ ಎದ್ವತದ್ವ ರೇಗಿದಳು. ಬೆಳಗಾದರೆ ಡಾಕ್ಟರ ಹತ್ತಿರ ಹೋಗುತ್ತಿದ್ದೇನೆ. ಬೆಳಿಗ್ಗೆ ಅಮ್ಮನೂ ಬಂದಿದ್ದಳು. ಡಾಕ್ಟರು ಎಷ್ಟು ಒಳ್ಳೆಯವರು ಅವರನ್ನು ಅಂದರೆ ಬಾಯಲ್ಲಿ ಹುಳು ಬೀಳುತ್ತೆ ಅಂತ, ಅಂದಳು. ಸುಬ್ಬಾಭಟ್ಟರ ಮನೆಯಲ್ಲೂ ಪುರಸ್ಕಾರ ಸಿಗಲಿಲ್ಲ. ಅವರ ಹೆಂಡತಿ ರುಕ್ಕಮ್ಮನವರಿಗೆ ಆಸ್ಪತ್ರೆಯಲ್ಲೇ ಆರು ತಿಂಗಳು ವಾಸ. ಐದುಬ್ಬಸ್ರನಮ್ಮ, ಡಾಕ್ಟರು ಪಕ್ಕದಲ್ಲೇ ಇರಬೇಕು! ಅಲ್ಲದೆ ರುಕ್ಕಮ್ಮ ಡಾ॥ ಮೀನಾಕ್ಷೀಗೆ ತುಂಬಾ ಪರಿಚಯ, ಪ್ರತಿ ಗಣೇಶನ ಹಬ್ಬದಲ್ಲೂ ರುಕ್ಕಮ್ಮ ಕೊಡುವ ಸೊಗಸಾದ ಉದ್ದಿನ ಕಡಬು ಕಾಯಿ ಕಡಬು ಡಾ॥ ಮೀನಾಕ್ಷೀಗೆ ತುಂಬಾ ಪ್ರಿಯ ಒಟ್ಟಿನಲ್ಲಿ ಭಟ್ಟರು ಮತ್ತು ಶಾಸ್ತ್ರಿಗಳ ಪ್ರಚಾರಕ್ಕೆ ಮನೆಯಲ್ಲೇ ಸಾಕಷ್ಟು ಪುರಸ್ಕಾರ ಸಿಗಲಿಲ್ಲ. ಆದರೂ ಸುದ್ದಿಯನ್ನು ಹೇಗೋ ಡಾಕ್ಟರಮ್ಮನ ಕಿವಿಯನ್ನು ಮುಟ್ಟಿಸಿದರು.

* * * *

ಒಂದಲ್ಲ ಒಂದಿನ ಆಸ್ಪತ್ರೇಗೆ ಹೋಗಲೇಬೇಕಾದ ಊರಿನ ಹೆಂಗಳೆಯರು ಇನ್ನೊಂದು ರೀತಿಯ ಪೇಚಿಗೆ ಸಿಕ್ಕಿಹಾಕಿಕೊಂಡರು. ಹೇಗೋ ಭಟ್ಟರ ಮನೆಯಲ್ಲಿ ಪೂಜೆ ಆಗಿಹೋಗುತ್ತಿತ್ತು. ಒಂದು ಕಾಯಿ ಒಡೆದು ಕೈಲಿದ್ದಷ್ಟು ದಕ್ಷಿಣೆ ಕೊಟ್ಟು ಬಂದರೆ ಮುಗಿದು ಹೋಗುತ್ತಿತ್ತು ವ್ರತ. ಬಾಗಿನದಲ್ಲಿ ಒಂದು ಚೀಟಿ ಬಟ್ಟೆ ಇಟ್ಟರು ಭಟ್ಟರ ಹೆಂಡತಿ ಸಂತೃಪ್ತಿಪಟ್ಟುಕೊಳ್ಳುತ್ತಿದ್ದಳು. ಈಗ ಡಾಕ್ಟರಮ್ಮನ ಮನೆಗೆ ಪೂಜೆಗೆ ಹೋದರೆ ಹಾಗೆ ಸುಲಭದಲ್ಲಿ ಆಗುತ್ತದೆಯೆ ಎನ್ನುವ ಯೋಚನೆ ಅವರಿಗೆ! ಡಾಕ್ಟರಮ್ಮ ಬಾಗಿನ ತೆರೆದು ನೋಡದೆ ಇರುತ್ತಾಳೆಯೇ. ಸಿಲ್ಕ್ ಬಟ್ಟೆಯೇ ಬೆಳ್ಳಿ ಬಟ್ಟಲೋ, ಹತ್ತು ರೂಪಾಯಿನ ನೋಟೋ ಇಡಬೇಕಾಗುತ್ತೆ ? ಇಡದೆ ಹೋದರೆ ಮುಂದಿನ ಹೆರಿಗೆ ಹೇಗೋ ? ಏನೋ ? ಅಂತ ಚಿಂತಾಕ್ರಾಂತರಾದರು, ಕಾಂತಾ ಮಣಿಗಳು! ಅಲ್ಲಲ್ಲಿ ಪಿಸು ಪಿಸು ಗುಸು ಗುಸು ಪ್ರಾರಂಭವಾಯಿತು. ಹೋಗಲೀ ಹೋಗದೆ ಇರೋಣವೆ ಎಂದು ಯೋಚಿಸುವವರೂ ಅವರೆ. ಅಲ್ಲದೆ ಭಟ್ಟರ ಮನೆ ಯಲ್ಲಿ ರುಕ್ಕಮ್ಮನೂ ಶಾಸ್ತ್ರಿಗಳ ಮಗಳು ಸರಸಾ ಮೊದಲು ಇವರೇ ಡಾಕ್ಟರಮನೇಗೆ ಹೋಗುತ್ತೇವೆಂದು ಹೇಳಿದಮೇಲೆ ಎಲ್ಲರೂ ಅಲ್ಲಿಗೇ ಹೋಗದೆ ವಿಧಿಯೇ ಇಲ್ಲ. ಹೀಗಾಗಿ ಈ ಬಾರಿ ತೌರು ಮನೆಯಿಂದ ಬಂದಿದ್ದ ಗೌರಿ ಹಬ್ಬದ ಮನಿಯಾರ್ಡರ ಜೊತೆಗೆ ಕೈಲಿದ್ದಿದನ್ನೂ ಸೇರಿಸಿ ಕೈಲಿಲ್ಲದೆ ಹೋದರೆ ಕೈಕೊಟ್ಟವನನ್ನು ಕಾಡಿಸಿ ಪಡೆದು ಮರದ ಬಾಗಿನಕ್ಕೆ ಅಂತಸ್ತಿಗೆ ತಕ್ಕ ಹಾಗೆ ಅಣಿಮಾಡಲೇ ಬೇಕಾಗಿತ್ತು.

* * * *

ಡಾ॥ ಮೀನಾಕ್ಷೀಗೆ ವ್ಯವಹಾರ ಜ್ಞಾನ ಚೆನ್ನಾಗೇ ಗೊತ್ತಿತ್ತು. ಶಾಸ್ತ್ರಿಗಳ ಮಗಳು ಗುರುವಾರದ ದಿವಸ ಆಸ್ಪತ್ರೇಗೆ ಪರೀಕ್ಷೆ ಮಾಡಿಸಿಕೊಳ್ಳೋಕೆ ಬಂದಿದ್ದಾಗ ಮೀನಾಕ್ಷಿ ಆಕೇನ ಚೆನ್ನಾಗಿ ಪರೀಕ್ಷೆಮಾಡಿ "ಶಾಸ್ತ್ರಿಗಳನ್ನು ಬಂದು ನೋಡುವಂತೆ ಹೇಳಮ್ಮ" ಎಂದಳು. ಅಷ್ಟಕ್ಕೇ ಆಕೆಗೆ ಭಯ. "ನಮ್ಮಪ್ಪ ಯಾಕೆ ಡಾಕ್ಟರೆ" ಅಂತಲೇ ರಾಗ ಎಳೆದಳು, ಏನು ಭಯಪಡಬೇಡಮ್ಮ. ನಿಮ್ಮ ತಂದೇನ ಕಳಿಸಮ್ಮ ಎಂದು ಹೇಳಿ ಡಾಕ್ಟರು ಹೊರಟು ಹೋದರು. ಮಗಳು ತಂದೆಗೆ ಭಯಪಡುತ್ತಲೇ ಸಮಾಚಾರ ತಿಳಿಸಿದಳು. ಪರೀಕ್ಷೆ ಮಾಡುತ್ತ ಮಾಡುತ್ತಾ ಅಂದರು ಅಂತಾನು ಅಂದಳು. ಶಾಸ್ತ್ರಿಗಳು ಭಯದಿಂದಲೇ ಓಡುತ್ತ ಬಂದರು. ಡಾ॥ ಮೀನಾಕ್ಷಿ ಎಲ್ಲವನ್ನು ವಿವರಿಸಿ ಹೇಳಿ ಗೌರಿ ವ್ರತದ ಏರ್ಪಾಟನ್ನು ನೀವು ಭಟ್ಟರು ನಿಂತುಕೊಂಡು ನಮ್ಮ ಮನೆಯಲ್ಲೇ ಮಾಡಿ. ನಿಮ್ಮ ನಿಮ್ಮ ಸಂಪಾದನೆ ನಿಮ್ಮದು. ನಮ್ಮದೇನೂ ಅಡ್ಡಿ ಇಲ್ಲ" ಎಂದಳು, ಶಾಸ್ತ್ರಿಗಳಿಗೆ ಆನಂದವೇ ಆಯ್ತು. ಸುದ್ದಿಯನ್ನು ಮುಟ್ಟಿ ಸಲು ಸುಬ್ಬಾಭಟ್ಟರ ಮನೆಗೆ ಓಡಿದರು. ಸುಬ್ಬಾಭಟ್ಟರು ರೋಗಪೀಡಿತಳಾದ ಹೆಂಡತಿಯನ್ನು ಮನಸ್ಸಿ ಬೈಯುತ್ತಿದ್ದರು. ಶಾಸ್ತ್ರಿಗಳು ಹೇಳಿದ ಗೌರಿ ವ್ರತದ ಏರ್ಪಾಟು ಹೇಳಿದಮೇಲೆ ಭಟ್ಟರು ಶಾಂತಚಿತ್ತರಾಗಿ ಡಾಕ್ಟರನ್ನು ಕೊಂಡಾಡಿದರು !

* * * *

ಗೌರಿ ಹಬ್ಬ ಇನ್ನೂ ಮೂರು ದಿನ ಇದೆ ಎನ್ನುವಾಗಲೇ ಮೀನಾಕ್ಷಿ ಡಾಕ್ಟರಿಗೆ ಎಂದೂ ಕಾಣದ ನೋಡದ ಸಡಗರ ! ಗಂಡು ಹುಡುಗನಹಾಗೆ ಬೆಳೆದಿದ್ದ ಡಾಕ್ಟರಿಗೆ ಜೀವನದಲ್ಲಿ ಎಷ್ಟೊಂದು ಸಡಗರ ಕಳೆದುಕೊಂಡೆ ಎಂದೆನಿಸುತ್ತಿತ್ತು. ಪೂಜೆಯ ಏರ್ಪಾಡಿನ ಜವಾಬ್ದಾರಿಯನ್ನು ಭಟ್ಟರು ಮತ್ತು ಶಾಸ್ತ್ರಿಗಳೂ ವಹಿಸಿಕೊಂಡರು. ಪೂಜೆಗೆ ಬರುವ ಮುತ್ತೈದೆಯರಿಗೆ ಮರದ ಬಾಗಿನಗಳನ್ನು ಕೊಡುವ ಕೆಲಸವನ್ನು ಹೆಡ್ ನರ್ಸ್ ಎಲಿಜಬೆತ್ತಮ್ಮನಿಗೆ ವಹಿಸಲಾಯಿತ್ತು. ಪೂಜಾಸಾಮಗ್ರಿಗಳನ್ನು ಅಣಿಮಾಡುವ ಕೆಲಸ ಸ್ಟಾಫ್ ನರ್ಸ್ ಕೊಡಗಿನ ಕಾವೇರಮ್ಮನ ಪಾಲಿಗೆ ಬಿತ್ತು. ಅವಳು ಟ್ರೇನಲ್ಲಿ ಪೋಟ್ಲೀಸಿನ ಸಾಮಾನುಗಳನ್ನು ತರುತ್ತಿದ್ದಾಗಲೇ ಕೆನ್ನೆಗಳು ಕಿತ್ತಳೆ ಹಣ್ಣಿನಂತೆ ಕೆಂಪಾಗುತ್ತಿತ್ತು, ಈಗ ಕೇಳಬೇಕೆ ? ಉಳಿದ ದಾದಿಯರೆಲ್ಲ "ಹಬ್ಬದ ದಿವಸ ನಮ್ಮ ಡ್ರೆಸ್ ಇದೇತಾನೆ" ಎಂದಾಗ ಎಲ್ಲರೂ ಬಿದ್ದು ಬಿದ್ದು ನಕ್ಕರು. "ಗೆಜ್ಜೇವಸ್ತ್ರಗಳನ್ನು ಬ್ಯಾಂಡೇಜ್ ಹತ್ತಿಯಲ್ಲೇ ಮಾಡಿ ಟಿಂಚರ್‌ನಲ್ಲಿ ನೆನೆಸಿಡುತ್ತೇವೆ, ಗೌರಿಗೆ ಸೆಪ್ಟಿಕ್ ಆಗದ ಹಾಗೆ ನೋಡಿಕೊಳ್ಳುತ್ತೇವೆ" ಎಂದಳು ಅಲ್ಲಿ ನರ್ಸ್. ಆಗತಾನೇ ಅಲ್ಲಿಗೆ ಬಂದ ಪ್ರಭಾವತಿ ಕಡೆಯುಮಾತಷ್ಟನ್ನೇ ಕೇಳಿ " ೭ನೆ ವಾರ್ಡ್ 38ನೆ ನಂಬರ್ ಗೌರಮ್ಮನನ್ನ ಬೆಳಿಗ್ಗೇನೇ ಡಿಸ್‌ಚಾರ್ಜ್ ಮಾಡಿದರು ಡಾಕ್ಟರಮ್ಮ" ಎಂದಳು, ಕಾವೇರಮ್ಮನ ನಗುವನ್ನು ನಿಲ್ಲಿಸಲು ಡಾಕ್ಟರು ಅವಳ ಬಾಯಿಗೆ ಥರ್ಮಾಮೀಟರನ್ನೇ ತುರುಕಬೇಕಾಯಿತು !

* * * *

ಡಾಕ್ಟರ ಕ್ವಾರ್ಟರ್ಸ್ ಆಸ್ಪತ್ರೆ ಪಕ್ಕದಲ್ಲೇ ಇದ್ದುದರಿಂದಲೂ ಮನೆಯಲ್ಲಿ ಜಾಗ ಸಾಕಾಗುವುದಿಲ್ಲವೆಂದು ಕೆಲವರು ಸಲಹೆ ಕೊಟ್ಟುದರಿಂದಲೂ ವ್ರತವನ್ನು ಆಸ್ಪತ್ರೆಯಲ್ಲಿ ಖಾಲಿ ಇರುವ ಕುಟುಂಬ ಯೋಜನೆಯ ವಾರ್ಡಿನಲ್ಲಿ ವ್ಯವಸ್ಥೆ ಮಾಡಬೇಕೆಂದೂ ಗೊತ್ತಾಯಿತು. ಮೇಲಿನ ಅಧಿಕಾರಿಗಳೂ ಇದಕ್ಕೆ ಒಪ್ಪಿದರು !

ಗೌರಿ ಹಬ್ಬದ ದಿವಸ ಮುಂಜಾನೆಯೇ ರಾಜೀವಪುರದ ಹೆರಿಗೆ ಆಸ್ಪತ್ರೆ ತಳಿರು ತೋರಣಗಳಿಂದ ಅಲಂಕೃತವಾಯಿತು. ಕುಟುಂಬ ಯೋಜನೆಯ ವಾರ್ಡಿಗೆ ಗೊನೆಗಳಿಲ್ಲದ ಬಾಳೆ ಕಂಬಗಳನ್ನು ಕಟ್ಟಿ ರಂಗುರಂಗಿನ ಬೋಗನ್‌ವಿಲ್ಲ ಡಾಲಿಯ, ಜಿನಿಯಾ ಹೂಗಳಿಂದ ಅಲಂಕರಿಸಲಾಯ್ತು ! ದಾದಿಯರು ಪೂಜೆಗೆ ಎಲ್ಲವನ್ನೂ ಅಣಿ ಮಾಡಿದರು. ಡಾ॥ ಮೀನಾಕ್ಷಿ ಮಂಗಳಸ್ನಾನವನ್ನುಮಾಡಿ ಶುಭ್ರವಾದ ಶ್ವೇತ ವಸ್ತ್ರಧಾರಿಯಾಗಿ ಭಕ್ತಿಯಿಂದ ಪೂಜೆಗೆ ಬಂದಳು. ನರ್ಸ್‌ಗಳೆಲ್ಲ ಯೂನಿಫಾರು ತೊಟ್ಟು ತಮ್ಮ ತಮ್ಮ ಕೆಲಸದಲ್ಲಿ ನಿರತರಾದರು. ನೋಡುಕ್ಕೆ ತುಂಬಾ ಅಚ್ಚು ಮೆಚ್ಚಾಗಿದ್ದರು ! ಕೆಲವರು ಮರದ ಬಾಗಿನಗಳನ್ನೆಲ್ಲ ಬಾಗಿಲ ಬಳಿ ಒಂದರ ಮೇಲೊಂದು ಜೋಡಿಸುತ್ತಿದ್ದರು ಸುಬ್ಬಾಭಟ್ಟರೂ. ಗಂಗಾಧರ ಶಾಸ್ತ್ರಿಗಳೂ ಬೆಳಿಗ್ಗೆಯೇ ಶುಭ ಮುಹೂರ್ತದಲ್ಲಿ ಕೆರೆಗೆ ಹೋಗಿ ಗೌರಿಯನ್ನು ವಾದ್ಯದ ಸಮೇತ ತಂದು ಆಸ್ಪತ್ರೆಗೆ ಸೇರಿಸಿದ್ದರು. ಊರಿನ ಮುತ್ತೈದೆಯರೆಲ್ಲ ನವನವೀನವಾಗಿ ಸಿಂಗರಿಸಿಕೊಂಡು ಮರದ ಬಾಗಿನಗಳ ಸಮೇತ ಆಸ್ಪತ್ರೆ ದಾರಿಯನ್ನು ಹಿಡಿದರು. ಎಂದೂ ಕಾಣದ ಅಪರೂಪದ ದೃಶ್ಯ ! ಹೆರಿಗೆ ಆಸ್ಪತ್ರೆ—ಎರಡನ್ನೂ ಮರೆಸಿ ಹಾಯಾಗಿಸಿತ್ತು.

ಸಾಮೂಹಿಕವಾಗಿ ಪೂಜೆ ಪ್ರಾರಂಭವಾಯ್ತು. ಶಾಸ್ತ್ರಿಗಳು ಮಂತ್ರಗಳನ್ನು ಹೇಳಿ ಮಧ್ಯೆ ಮಧ್ಯೆ ಸೂಚನೆಗಳನ್ನು ಕೊಡುತ್ತಿದ್ದರು. ಪೂಜೆ ಯಥಾವಿಧಿಯಾಗಿ ಮುಗಿಸಿಕೊಂಡು ಮುತ್ತೈದೆಯರು ಕೈಗಳಿಗೆ ಕಂಕಣಗಳನ್ನು ಕಟ್ಟಿಕೊಂಡರು. ಶಾಸ್ತ್ರಿಗಳಿಗೆ ದಕ್ಷಿಣೆ, ಎಲೆಯಡಿಕೆ ಕೊಟ್ಟರು. ಎಲ್ಲವೂ ವ್ಯವಸ್ಥಿತ ರೀತಿಯಲ್ಲಿ ನಡೆಯಿತು. ಬಂದ ಹೆಂಗಸರೆಲ್ಲ ಡಾಕ್ಟರಮ್ಮನಿಗೆ ಮರದ ಬಾಗಿನಗಳನ್ನು ತಪ್ಪದೆ ಕೊಟ್ಟರು, ಎಲಿಸಿಬತ್‌ಯಮ್ಮ ಬಂದ ಮರದ ಬಾಗಿನಗಳನ್ನೆಲ್ಲ ಜೋಡಿಸಿಡುತ್ತಿದ್ದ ಹಾಗೆ ಆ ಮುತ್ತೈದೆಯರಿಗೆ ನರ್ಸ್ ಕಾವೇರಮ್ಮ ಡಾಕ್ಟರಮ್ಮನ ಪರವಾಗಿ ಪ್ಲಾಸ್ಟಿಕ್ ಪಟ್ಟಿಯಿಂದ ಬಿಗಿದ ಒಂದೊಂದು ಮರದ ಬಾಗಿನವನ್ನು ಕೊಟ್ಟು ಕಳಿಸುತ್ತಿದ್ದಳು, ಸುಮಾರು ಹನ್ನೆರಡು ಗಂಟೆಯವರೆಗೂ ಬಾಗಿನ ಸೇವೆ ನಡೆಯಿತು. ಭಟ್ಟರಿಗೂ. ಶಾಸ್ತ್ರಿಗಳಿಗೂ ಸಾಕಷ್ಟು ಸಂಪಾದನೆಯಾಗಿ ಸಂತೃಪ್ತಿಯ ನಗೆಯನ್ನು ಬೀರಿದರು. ಡಾಕ್ಟರಮ್ಮ ಅವರಿಗೆ ಬೇರೆ ಸಂಭಾವನೆಯನ್ನೂ ಮರದ ಜೊತೆಗಳನ್ನೂ ಕೊಟ್ಟು ಮನೆಗೆ ಕಳಿಸಿಕೊಟ್ಟಳು ಧನ್ಯವಾದಗಳನ್ನು ಹೇಳಿ.

ಕುಟುಂಬ ಯೋಜನೆಯ ವಾರ್ಡ್ ತುಂಬಾ ಮರದ ಬಾಗಿನಗಳೇ. ಎಲ್ಲವೂ ಮುಗಿದಮೇಲೆ ಡಾಕ್ಟರೂ ದಾದಿಗಳೂ ಎಲ್ಲರೂ ಸೇರಿ ಮರದ ಬಾಗಿನಗಳನ್ನೆಲ್ಲ

ತೆಗೆದು ಅಲ್ಲಿದ್ದ ಸಾಮಾನುಗಳನ್ನೆಲ್ಲ ಬೇರೆ ಬೇರೆ ಮಾಡಿದರು. ನರ್ಸುಗಳಿಗೆ ಆಶ್ಚರ್ಯ! ಆನಂದ! ಬಾಗಿನಗಳಲ್ಲಿದ್ದ ಸಿಲ್ಕ್ ಬಟ್ಟೆಗಳೇನು? ಬೆಳ್ಳಿ ಬಟ್ಟಲುಗಳೇನು? ಅಲಂಕಾರದ ಬಳುವಳಿ ಸಾಮಾನುಗಳು, ಕಂಸಿರಿ ಕೆಲಸದ ಗಂಧದ ಮರದ ಸಾಮಾನುಗಳು. 5. 10 ರೂಪಾಯಿನ ನೋಟುಗಳು. ಇದನ್ನೆಲ್ಲ ನೋಡಿದ ಕಾವೇರಮ್ಮ ಕಾವೇರಿದ ಮರ ಹಾಗೇ ಆಡಿದಳು! ಎಲಿಸ್‌ಬತ್‌ಯುಮ್ಮ "O ಗೌರಿ ಮೇಡಂ" ಎಂದು ಉದ್ಗಾರ ತೆಗೆದಳು,

ಡಾ॥ ಮೀನಾಕ್ಷಿ ಇದನ್ನೆಲ್ಲ ನೋಡುತ್ತಿದ್ದವಳು ಮನಸ್ಸಿನಲ್ಲೇ ಏನೋ ಲೆಕ್ಕ ಹಾಕುತ್ತಿದ್ದಳು. ಎಲ್ಲಾ ಸಾಮಾನುಗಳನ್ನೂ ಅಳತೆಮಾಡಿ ಪಟ್ಟಿಮಾಡಿ ಎಂದು ಆಜ್ಞೆ ನೀಡಿದಳು. ನರ್ಸುಗಳು ಹಾಗೆಯೇ ಮಾಡಿದರು, ಡಾ॥ ಮೀನಾಕ್ಷಿ ಅವರಿಗೂ ಬಹುಮಾನಗಳನ್ನು ಕೊಟ್ಟು ಆ ಬಳುವಳಿಯುನ್ನೆಲ್ಲ ಆಸ್ಪತ್ರೆಯ ಬಡರೋಗಿಗಳ ನಿಧಿಗೆ ಸೇರಿಸುವಂತೆ ಪ್ರಕಟಿಸಿ ಎಲ್ಲರಿಗೂ ಧನ್ಯವಾದಗಳನ್ನು ಹೇಳಿ ಸರಸರನೆ ಹೊರಟು ಹೋದಳು!

ಇತ್ತ ಡಾಕ್ಟರಿಂದ ಪಡೆದ ಮರದ ಬಾಗಿನಗಳನ್ನು ಮನೆಗೆ ಹೋಗಿ ಮುತ್ತೈದೆಯರು ದೇವರ ಮುಂದಿಟ್ಟು ಭಕ್ತಿಯಿಂದ ಗೌರಿಗೆ ನಮಸ್ಕಾರಮಾಡಿ ಇಷ್ಟಾರ್ಥ ಕೇಳಿಕೊಂಡರು.

ಅರವತ್ತಾರರ ಗೌರಿ ಇಷ್ಟಾರ್ಥವನ್ನು ಅನುಗ್ರಹಿಸಿದ್ದಳು!

ಕುತೂಹಲದಿಂದ ಬಾಗಿನದ ಮರಗಳನ್ನು ಪ್ಲಾಸ್ಟಿಕ್ ಸೆರಿಗಿನಿಂದ ಬಿಡಿಸಿ ಮೇಲಿನ ಮರವನ್ನು ಜರುಗಿಸಿದರು. ಕೆಳ ಮರದಲ್ಲಿ ಒಂದು ಬಾಳೆ ಎಲೆಯಂತ ನವುರಾದ ಪ್ಲಾಸ್ಟಿಕ್ ಚೌಕವನ್ನು ಹಾಸಲಾಗಿತ್ತು ಮಧ್ಯದಲ್ಲಿ ಅಂದವಾದ ಪ್ಲಾಸ್ಟಿಕ್ ಭರಣಿಯೊಂದನ್ನು ಇಡಲಾಗಿತ್ತು. ಜೊತೆಗೆ ಒಂದು ಪುಸ್ತಕವನ್ನೂ ಇಟ್ಟಿದ್ದರು. ಅವರ ಕುತೂಹಲ ಇನ್ನೂ ಕೆರಳಿತು, ಭರಣಿಯನ್ನು ಬಿಚ್ಚಿದರು. ಅವರಿಗಾಗಿ ಕಾಯುತ್ತ ಇತ್ತು—ಲೂಪು!

ಹಾ. ರಾ.

ಬಸ್ಸಿಗಾಗಿ ಕಾಯುತ್ತಾ....

ಬಸ್ ಸ್ಟಾಪಿನಲ್ಲಿ ಕಾಯುತ್ತ ನಿಂತಿದ್ದೆ.
ಸಿಟಿ ಬಸ್ಸಿಗಾಗಿ
ಜನ ಘೋಷಣೆಯು ಕೇಳಿಬಂತು ನೀತಂತೆ
ಹೊಸ ಮಂತ್ರಿಮಂಡಲ ಬಂತೆಂದು-ಇನ್ನು,
ಕಾಯ್ತಿದ್ದೆ. ಸಿಟಿ ಬಸ್ಸಿಗಾಗಿ.

—ಎನ್. ಪ್ರಭಾಕರ್

ಡೆಮಾಕ್ರಸಿಯು ಗರಡಿಯಲ್ಲಿ

(ಕುವೆಂಪು ಅವರ ಕ್ಷಮೆ ಬೇಡಿ)

●

ರಾಜಕೀಯದ ಪರಸೆ
ಕಂಡು ಕಡು ಕಂಗೆಡಲು
ಪೋಟಿಗನೆ ಬಾ ಇಲ್ಲಿ
    ಭ್ರಾಂತಿಯಿಹುದು
ಮೊರೆ ಮೊರೆದು ಕಿವಿ ಕೊರೆಯೆ
ನಾಲಗೆಯು ತೀಟೆಯಿಂದೆ
ನೋಯಿಸಲು ಕಂಗಳನು
ನೂರು ಬಗೆ ವೇಷವಿದೆ
ಜೀವವನು ಬಳಲಿಸಲು
ಸತತ ಕಚ್ಚಾಟವಿದೆ
ಸೋದರನೆ ಬಾ ಇಲ್ಲಿ
ಭ್ರಾಂತನಾಗುವೆಯಿಲ್ಲಿ
ತಲೆಯು ಹಿಡಿಯುವೆ ಇಲ್ಲಿ
ಬೆರಳ ಕಚ್ಚುವೆ ಇಲ್ಲಿ
ಲೋಕಸಭೆಯಲ್ಲಿ

ಪ್ರತಿ ಪಕ್ಷ ಮೊಳಗುತಿರೆ
ಕೈ ಮುಷ್ಠಿ ಬಿಗಿಯುತಿರೆ
ಮಂತ್ರಿಗಳ ಮೋರೆಯುಲಿ
ಕತ್ತಲೆಯು ಕವಿದುಬರೆ
ಪೋಟಿಗನೆ ಬಾ ಇಲ್ಲಿ
    ನಿಂತು ನೋಡು.

ಪೀಯೆಸ್ಪಿ, ಕಾಂಗ್ರೆಸ್ಸು
ಕಳಗ ಮುಸ್ಲಿಂ ಲೀಗು
ಎಡ ಬಲದ ಕಮ್ಯುನಿಸ್ಟು
ಎಸ್ಸೆಸ್ಪಿ, ಸ್ವಾತಂತ್ರ್ಯ
ಲಂಗ್ ಲಗಾಮೋ ಇರದ
ಸಕಲ ವಾಗ್ಬಾಣಗಳ
ವಿವಿಧ ಕಚ್ಚಾಟಗಳ
ಎದೆ ಬಿರಿಯೆ ಮೈ ಉರಿಯೆ
ಹಲ್ಕಟ್ಟಿ ತಲೆ ಕೆರೆದು
    ಕುಂತು ನೋಡು.

ಕಣ್ಣು ಕಿಡಿ ಕಾರುತಿರೆ
ಮೈ ಬೆವರ ಸುರಿಸುತಿರೆ
ಎದೆ ಬಡಿತ ಹೆಚ್ಚುತಿರೆ
ನಿಂತಲ್ಲಿ. ಕುಂತಲ್ಲಿ
ಐಬುಗಳು ಕಾಣಬರೆ
ಮಧು ಲಿಮಯೆ, ಬಸು, ಗುಪ್ತ
ಕೃಪಲಾನಿ, ಲೋಹಿಯಾ
ಎಗರೆಗರಿ ನಿಲ್ಲುತಿರೆ
ವೋಟಿಗನೆ ಬಾ ಇಲ್ಲಿ
    ಕುಂತು ನೋಡು.

P. A. C. ಪ್ರಿವಿಲೇಜು
ಮೋಷನ್ನು ಕೊಶ್ಚನ್ನು
ವಾಕ್ ಔಟ್ ನೆಕ್ ಔಟು
ನೋ ಕಾನ್ಫಿಡನ್ಸು
ತೇಜಾ ಅಮಾನ್ ಚಂದ
ಸ್ವರಣಸಿಂಗ ಸುಬ್ರಮಣಿ
ಮಂತ್ರಿ ಮಾಜೀ ಮಂತ್ರಿ

ಸೆಕ್ರೆಟ್ರಿ ಸ್ಪೀಕರ
ಅದೂ ತಪ್ಪು ಇದೂ ತಪ್ಪು
ಕಣ್ ತಪ್ಪು ಕಿವಿ ತಪ್ಪು
ಬಾಯಿ ತಪ್ಪು ಲೆಕ್ಕ ತಪ್ಪು
ಪೇಪರಾತನ ತಪ್ಪು
ತಿಳಿದ, ತಿಳಿಯಂದ ತಪ್ಪು
ಆಗ ಮಾಡಿದ ತಪ್ಪು
ಈಗ ಆಡಿದ ತಪ್ಪು
ಹಾಯ್ ತಪ್ಪು ತಪ್ಪೇ ತಪ್ಪು
ನಾಡ ಬದುಕೇ ತಪ್ಪು
ಎಂಬ ಭ್ರಾಂತಿಯು ಪಡೆಯೇ
ಬಾ ಇಲ್ಲಿ ಕುಂತು ನೋಡು.

ಕತೆಗಳನು ಕಟ್ಟಲಿಕೆ
ಕತೆಗಾರ ಬಾ ಇಲ್ಲಿ
ಬುಕ್ಕುಗಳ ಬರೆಯಲಿಕೆ
ಆಥರನೆ ಬಾ ಇಲ್ಲಿ
ವಕ್ರ ಚಿತ್ರವ ಬರೆಯೆ
ಬಾರೆೊ ಕಾರ್ಟೂನಿಸ್ಟ
ಪಕ್ಷಗಳ ತಳೆಯಲಿಕೆ
ಬಾರೋ ಶ್ರೀ ಸಾಮಾನ್ಯ
ಇಂಡ್ಯವನು ಆಳೆಯಲಿಕೆ
ಬಾರೋ ಹೊರ ನಾಡಿಗನೆ
ದೇಗುಲ ಡೆಮಾಕ್ರಸಿಗೆ
ಕುಸ್ತಿಗಳ ಸದಸ್ಯರಿಗೆ
ಹಾರ್ಟ್ ಟ್ರಬಲ್ಲಿಗೆ ಮೂಲ
ಬೊಕ್ಕಸಕೆ ಬರಿ ಶೂಲ
ಈ ಲೋಕ ಸಭೆಯು.

—ರಾಮಿ

ಒಂದು ಮಾದರಿ ಸಂದರ್ಶನ

"ನಮಸ್ಕಾರ"

"ಓಹೋ ಹೋ, ಬನ್ನಿ, ನಮಸ್ಕಾರ ಆಕಾಶರಾಯರಿಗೆ. ನೀವು ಪರದೇಶದಲ್ಲಿ ವಿದ್ಯಾಭ್ಯಾಸ ಮುಗಿಸದಿರೀಂತ ತಿಳೀತು, ಈಗ ಭಾರತದಲ್ಲಿ ಏರುತ್ತಿರುವ ಆಹಾರದ ಮತ್ತಿತರ ಪದಾರ್ಥಗಳ ಬೆಲೆಗಳನ್ನು ಹೇಗೆ ತಡೆಗಟ್ಟುವುದು ? ಇದರ ವಿಷಯವಾಗಿ ನಿಮ್ಮ ಅಭಿಪ್ರಾಯವೇನು ?"

"ನೋಡೀ, ಸಾರ್, ನನ್ನನ್ನು ಕೇಳಿದರೆ ಪಾಂಚವಾರ್ಷಿಕ ಯೋಜನೆಗೆ ರಜ ಕೊಟ್ಟುಬಿಡಬೇಕು. ಹೇಗೆಂದರೆ, ಸ್ಕೂಲು ಮೇಷ್ಟರಿಗೆ ಬೇಸಿಗೆ ರಜದಲ್ಲಿ ಸಂಬಳ ಕೊಡದೇ ಇರುವುದರಿಂದ ಹಣ ಉಳಿತಾಯವಾಗುಲ್ವೇ ? ಹಾಗೇ ಪಂಚವಾರ್ಷಿಕ ಯೋಜನೆಗೆ ರಜ ಕೊಟ್ಟರೆ ಹಣ ಉಳಿತಾಯವಾಗಿ ಬೆಲೆ ಏರಿಕೆ ಸ್ವಲ್ಪ ಮಟ್ಟಿಗೆ ಕಡಿಮೆ ಯಾಗುತ್ತದೆ."

"ಆಹಾ ! ನಿಮ್ಮ ಸಲಹೆ ಬಹಳ ಯೋಗ್ಯವಾಗಿದೆ. ಚಿನ್ನದಂತಹ ಮಾತು ! ನೀವು ಈ ಬಗ್ಗೆ ಇನ್ನೂ ಏನೇನು ಹೇಳುವಿರಿ ? ನಮ್ಮ ಶ್ರೋತೃ ವೃಂದಕ್ಕೆ ತಿಳಿಸು ವಿರಾ ?"

"ಎಲ್ಲಾ ಅಂಗಡಿಯವರಿಗೂ ಟೆಲಿಫೋನ್ ಸಂಪರ್ಕ ಕತ್ತರಿಸಿಬಿಡಬೇಕು. ಪೋಸ್ಟ್ ಆಫೀಸಿನವರು ಆಯಾಯಾ ಊರಿನ ಅಂಗಡಿಯವರ ಕಾಗದವನ್ನೆಲ್ಲಾ ಒಡೆದು ನೋಡಿ ರೇಟ್ ಲಿಸ್ಟ್‌ಗಳಿದ್ದರೆ ಅದನ್ನು "ಸೆನ್ಸಾರ್" ಮಾಡಿಕೊಡಬೇಕು. ವೃತ್ತ ಪತ್ರಿಕೆಗಳಲ್ಲಿ ದಿನ ಬಳಸುವ ಪದಾರ್ಥಗಳ ಬೆಲೆಗಳನ್ನು ಅಚ್ಚುಹಾಕಲೇಬಾರದು ಆಗ ಒಂದು ಊರಿನಿಂದ ಇನ್ನೊಂದು ಊರಿಗೆ ಪದಾರ್ಥಗಳ ಬೆಲೆ ಗೊತ್ತಾಗದೇ ಆಯಾಯಾ ಊರಿನ ಬೆಲೆಗೇ ಮಾರಬಹುದು. ಉದಾಹರಣೆಗೆ "ಎಣ್ಣೆ ಕೇಜೀಗೆ ಆರು ರೂಪಾಯಿಂದ ಎಂಟು ರೂಪಾಯಿ ಇತ್ತು" ಎಂದು ವರದಿ ಮಾಡಿದರೆ ಎಲ್ಲಾ ಊರಿನವರೂ ಎಂಟು ರೂಪಾಯಿಗೇ ಒಂದು ಕೇಜೀಯಂತೆ ಎಲ್ಲಾ-ತರಹ ಎಣ್ಣೆ ಯನ್ನು ಮಾರಲು ಶುರು ಮಾಡುತ್ತಾರೆ ! ಇದೇರೀತಿ ಎಲ್ಲಾ ಪದಾರ್ಥಗಳ ಬೆಲೆಗಳೂ ಏರಿಬಿಡುತ್ತವೆ. ಆದ್ದರಿಂದ ಬೆಲೆಗಳ ವರ್ತಮಾನ ಹರಡದಂತೆ ಅದರ ಬುಡಕ್ಕೇ ಕೊಡಲಿ ಹಾಕಬೇಕು.

ಇನ್ನೊಂದು ಸಲಹೆ ಏನೆಂದರೆ ಸರ್ಕಾರೀ ನೌಕರರಿಗೆ ತುಟ್ಟಿಭತ್ಯೆ ಏನೋ ಮಹಾ ಜಾಸ್ತಿಮಾಡಿದೀವಿ ಅಂತ ವರ್ತಮಾನ ಪತ್ರಿಕೆಗಳಲ್ಲಿ ಏಕೆ ಬೊಬ್ಬೆಯಿಡಿಸ

ಬೇಕು ? ಹಾಗೆ ಹಾಕಿಸಿದರೆ ಎಲ್ಲಾ ವ್ಯಾಪಾರಿಗಳೂ ಪದಾರ್ಥಗಳಿಗೆಲ್ಲಾ ಬೆಲೆ ಜಾಸ್ತಿ ಹೇಳದೇ ಬಿಡುತ್ತಾರೇ ? ಆದ್ದರಿಂದ ಸರ್ಕಾರಿ ನೌಕರರಿಗೆ "ಕಾನ್‌ಫಿಡೆನ್‌ಷಿಯಲ್" ಆಗಿ ಒಳಗಿಂದೊಳಗೇ ತುಟ್ಟಿಭತ್ಯೆ ಜಾಸ್ತಿಮಾಡಿ ಹೊರಗೆ ಬೊಬ್ಬೆಯಿಡಿಸದಿದ್ದರೆ ರೇಟ್‌ಗಳೆಲ್ಲಾ ಇಳಿಯಲ್ವೇ ?

ಕಡೇದಾಗಿ ನಾನು ಏನು ಹೇಳಬೇಕೂಂತಾಂತಾಂತಾಂತಾಂದ್ರೇ‌ೀೀ "ನಿಮ್ಮ ಆಕಾಶವಾಣಿಯಲ್ಲಿ ಪ್ರಸಾರವಾಗುವ ರೇಟ್ ಲಿಸ್ಟ್‌ನ ಮೊದಲು ನಿಲ್ಲಿಸಿ. ಗೊತ್ತಾಯ್ತೇೀ".

"ಸಾಕು, ಸಾಕು. ಏನೋ ನಿಮ್ಮ ಸಂದರ್ಶನವನ್ನು ಆಕಾಶವಾಣಿಯಿಂದಲೇ ಮಾಡಿಸೋಣಾಂತಿದ್ರೆ ನಮಗೇ ಬಾಂಬ್ ಇಡಕ್ಕೆ ಬಂದ್ರಾ ! ಸಾಕ್ಕು ನಿಮ್ಮ ಸಂದರ್ಶನ" ಅಂತ ಹಾರಾ ಹಣ್ಣು ಕೊಡದೇ ಕಳಿಸಿಬಿಡೋದೇ ಆಕಾಶರಾಯರನ್ನ !

ಹಾ. ಮ್ಯ. ಸೂರಿ

ನಾವೆಲ್ಲಾ ಕೋಟ್ಯಾಧೀಶರು ! (ಸಾಲ)

ತಲೆ ಬರಹ ನೋಡಿ ಗಾಬರಿಯಾಗಬೇಡಿ, ನಾವೆಲ್ಲಾ ಕೋಟ್ಯಾಧೀಶರು (ಸಾಲ) ಎಂದರೆ ನಿಮಗೆ ಆಶ್ಚರ್ಯವಲ್ಲವೆ ? ಅಂಥ ಅಚ್ಚರಿ ಪಡಬೇಕಾಗಿಲ್ಲ. ಇಗೋ ಇಲ್ಲಿದೆ ಲೆಖ್ಖ. ನಮ್ಮ ದೇಶದ ಸಾಲ, ರೂಪಾಯಿ ಮೌಲ್ಯ ವಿಚ್ಛೇದನವಾದಮೇಲೆ ೨೬ ನೂರು ಕೋಟಿ ರೂಪಾಯಿಗಳಿದ್ದುದು ೯೧ ನೂರು ಕೋಟಿಗಳಿಗೆ ಏರಿತು. ನಮ್ಮ ದೇಶದ ಜನ ಸಂಖ್ಯೆ ೪೧ ಕೋಟಿ ಇರಬಹುದು ಎಂದು ಅಂದಾಜು. ಹೋಗಲಿ ೫೦ ಕೋಟಿ ಎಂದು ಗುಂಡು ಅಂಕಿ ಇಟ್ಟುಕೊಳ್ಳೋಣ. ಎಂದರೆ ಒಬ್ಬನಿಗೆ ೮೨ ಲಕ್ಷ ರೂಪಾಯಿಗಳ ಸಾಲ ಬಂದ ಹಾಗಾಯಿತು. ಎಂದಮೇಲೆ ನಾವೆಲ್ಲಾ ಕೋಟ್ಯಾಧೀಶರಾಗಲಿಲ್ಲವೆ ?

— ಇಂದಿರಾಪ್ರಿಯ

*   *   *   *

ಇರಿದುಕೊಳ್ಳಲೇ — ಹೊಟ್ಟೆ
ತಿವಿದುಕೊಳ್ಳಲೇ — ಕಣ್ಣು
ಅತ್ತೆ ಸೊಸೆ ಜಗಳದಲ್ಲಿ
ಮಂಗನಾದ ಹಣ್ಣು

—ನಿಶಾಚರ

ಭಿತ್ತಿಯ ಬರಹ

ಮೊನ್ನೆ ಅಂಚೆ ಕಚೇರಿಗೆ ಒಂದು ಲಕೋಟೆ ತೂಕಮಾಡಿಸಿ ಸ್ಟ್ಯಾಂಪು ಅಂಟಿಸಿ ಪೋಸ್ಟ್‌ಮಾಡಲು ಹೋಗಿದ್ದೆ. ಸ್ಟ್ಯಾಂಪು ಕೊಂಡು ಅಂಟಿಸಿದಮೇಲೆ ಲಕೋಟೆಯನ್ನು ಅಂಟಿಸಬೇಕಿತ್ತು, ಮೈದಾಹಿಟ್ಟು ಕುದಿಸಿ ಮಾಡಿದ ಅಂಟು ಅಲ್ಲೇ ಇತ್ತು. ತರ್ಜನಿಬೆರಳಲ್ಲಿ ಅದನ್ನು ತೆಗೆದುಕೊಂಡು ಲಕೋಟೆಗೆ ನೊರೆದು ಅಂಟಿಸಿದ್ದಾದಮೇಲೆ ಬೆರಳಿಗಂಟಿದ್ದನ್ನು ಎಲ್ಲಿಗೆ ವರೆಸ್ತೊದೂಂತ ಯೋಚನೆಮಾಡಿ. ಕೊನೆಗೆ ಎಲ್ಲರೂ ಮಾಡುವಂತೆ ಗೋಡೆಗೊರೆಸುವುದೇ ಸೂಕ್ತವೆಂದು ಹಾಗೆ ಮಾಡಲು ಬೆರಳನ್ನು ಗೋಡೆಯತ್ತ ಒಯ್ದಾಗ, ಅಲ್ಲಿ ಪೆನ್ಸಿಲ್ಲಲ್ಲಿ ಬರೆದ ಅಕ್ಷರಗಳು ಕಾಣಿಸಿದವು. ಕುತೂಹಲದಿಂದ ನೋಡಿದೆ,

"ರೀ ಇವರೇ,

ಮೊನ್ನೆ ನೀವು ನಿಮ್ಮ ಪೆನ್ನನ್ನ ನನ್ನ ಹತ್ರಾನೇ ಮರೆತುಬಿಟ್ಟು ಹೋದ್ರಲ್ಲ ? ಅದನ್ನ ಪೋಸ್ಟ್‌ಮಾಸ್ಟರ ಕೈಲಿ ಕೊಟ್ಟಿದ್ದೇನೆ ಇಸ್ಕೊಳ್ಳಿ.

(ಅರ್ಥವಾಗದಂತಹ ಸಹಿ)
೧೦—೯—೬೬

ಎಂದಿತ್ತು.

ಅಷ್ಟು ಓದಿದಮೇಲೆ ಅದು ಏನಾಗಿರಬಹುದೆಂದು ತಕ್ಷಣ ತಿಳಿಯಿತು ನಂತರ ಆ ಬರಹದ ಕೆಳಗಿದ್ದುದನ್ನು ಓದಿದೆ.

"ಅಲ್ಲಾರಿ,

ಪೋಸ್ಟ್‌ಮಾಸ್ಟರ ಹತ್ರ ಕೊಟ್ಟೇ ಇಲ್ವಂತೆ ನೀವು ಪೆನ್ನ ! ಅವ್ರ ಹತ್ರ ವಿಚಾರ್ಸಿದ್ದಾಯ್ತು, ನಿಮ್ಮನೆ ವಿಳಾಸ ತಿಳಿಸಿ

ಲಿಂಗಣ್ಣ
೧೨—೯—೬೬

ಅದರ ಕೆಳಗಡೆ ಈ ವಿಳಾಸ ಬರೆದಿತ್ತು

"೬೪, ೨೦ನೇ ಅಡ್ಡ ರಸ್ತೆ.
ಮಲ್ಲೇಶ್ವರಂ

(ಅರ್ಥವಾಗದಂತಹ ಸಹಿ)
೧೬—೯—೬೬

ನನಗೆ ತಿಳಿದಂತೆ ಮಲ್ಲೇಶ್ವರದಲ್ಲಿ ೨೦ನೇ ಕ್ರಾಸ್ ಇಲ್ಲವೇ ಇಲ್ಲ ಈವರೆಗೂ! ಅದು ಸುಳ್ಳು ವಿಳಾಸವೆಂದುಕೊಳ್ಳುತ್ತಾ ಮುಂದಿದ್ದ ಲಿಂಗಣ್ಣನ ಬರಹ ನೋಡಿದೆ.

"ಏನ್ರೀ. ಸುಳ್ಳು ಅಡ್ರೆಸ್ ಕೊಟ್ಟಿದ್ದೀರಾ? ನನಗೆ ಸಾಕಾಗಿ ಹೋಯ್ತು ಹುಡುಕಿ ಹುಡುಕಿ. ನೀವೇ ಆ ಪೆನ್ನನ್ನ ಪೋಸ್ಟ್‌ಮಾಸ್ಟರಿಗೆ ತಂದೊಪ್ಪಿಸಿ ಅವ್ರಿಂದ ನಾನು ಇಸ್ಕೊಳ್ತೀನೆ. ತಂದುಕೊಡದಿದ್ದರೆ.... ...

ಲಿಂಗಣ್ಣ
೧೭—೯—೬೬

ಅದರ ಕೆಳಗಡೆ ಅಜ್ಞಾತ ಬರಹಗಾರ ಹೀಗೆ ಬರೆದಿದ್ದ

"ಲೋಯ್ ಲಿಂಗ.

ನಿನ್ನ ಈ ನಾಲ್ಕಾಣೆ, ಗತಿಗೆಟ್ಟ ಪೆನ್ನಿಗೆ ಎಷ್ಟು ಆಟ ಆಡ್ತೀಯಲ್ಲೋ! ಅದನ್ನ ಪೋಸ್ಟ್‌ಮಾಸ್ಟರಿಗೆ ತಂದುಕೊಡದಿದ್ದರೆ ಏನು ಮಾಡ್ತೀಯೋ ಗುಲ್ಡು?

(ಅರ್ಥವಾಗದಂತಹ ಸಹಿ)
೧೯...೯—೬೬

ಅದ ೨ ಕೆಳಗಡೆ ಲಿಂಗಣ್ಣನ ಬರಹ

"ಹಲ್ಲು ಮುರೀತೀನಿ!

ಲಿಂಗಣ್ಣ
೨೦—೯—೬೬

ಅದನ್ನು ನೋಡಿ. ನಾನು ಅದರ ಕೆಳಗೆ

"ಅಯ್ಯೋ ಹುಚ್ಚಪ್ಪಾ!" ಎಂದು ಪೆನ್ಸಿಲ್ಲಲ್ಲಿ ಬರೆದೆ.

ಬೆನ್ನಮೇಲೆ ಯಾರೋ ಕೈ ಹಾಕಿದಂತಾಯಿತು. ತಿರುಗಿದೆ. "ರೀ! ನನ್ನ ಪೆನ್ನು ಕೊಡ್ರಿ; ನಾನೇ ಲಿಂಗಣ್ಣ!" ಎಂದ ಹಿಂದೆ ನಿಂತಿದ್ದ ಗೂಂಡಾಸಾಮಿ!

ಅವನ ಪೆನ್ನು ಪಡೆದಿದ್ದವನು ನಾನಲ್ಲವೆಂದು ಅವನಿಗೆ ತಿಳಿಸಿ ತಪ್ಪಿಸಿಕೊಂಡು ಮನೆಸೇರುವಷ್ಟರಲ್ಲಿ ಸಾಕು ಸಾಕಾಯಿತು!

—ಈಶ್ವರಚಂದ್ರ

ಮುಂಬರುವ ಪಠ್ಯಪುಸ್ತಕದಲ್ಲಿ!

ನಮ್ಮ ದೇಹ ಪೋಷಣೆಗೆ ಅಗತ್ಯವಾದ ಆಹಾರ

೧) ಹೆಚ್ಚು ಪ್ರೋಟೀಯುಕ್ತವಾದ ಇಲ್ಲಿ, ಹೆಗ್ಗಣಗಳ ಮಾಂಸ.

೨) ಒಂಟೆಯ ಹಾಲು.

೧. ವಿವರಣೆ—ಮಾನವನ ಆಹಾರ ಧಾನ್ಯಗಳನ್ನು ಧ್ವಂಸ ಮಾಡುವ ಇಲಿ, ಹೆಗ್ಗಣಗಳನ್ನೇ ಮಾನವ ತಿಂದು ಧ್ವಂಸ ಮಾಡಿದಂತಾಗುವುದು. ಆದರೆ ಇದರಲ್ಲಿ ಸರ್ಕಾರಿ ಗುದಾಮುಗಳಲ್ಲಿನ ಹಳೆ ಇಲಿ ಹೆಗ್ಗಣಗಳನ್ನು ತಿಂದು ಜೀರ್ಣಿಸಿಕೊಳ್ಳಲು ಸಾಧ್ಯವೇ? ಎಂಬುದು ಇನ್ನೂ ವಿವಾದಾಸ್ಪದ ವಿಷಯುವೇ ಆಗಿದೆ. ಅದಕ್ಕೊಂದು ಸಮಿತಿ ಏರ್ಪಡಿಸಲಾಗಿದೆ

—ಇಂದಿರಾಪ್ರಿಯ

ರೆಡ್ ಗಾರ್ಡ್ಸ್ ಇಲ್ಲಿಗೆ ಒರಬಾರದೆ

ಅಂತ ಅನ್ನಿಸಿತು ನನಗೆ, ಪತ್ರಿಕೆಗಳಲ್ಲಿ ರೆಡ್ ಗಾರ್ಡ್ಸ್ ಮಂದಿ ಚೀನಾದಲ್ಲಿ ಹಾವಳಿ ಮಾಡುತ್ತಿರುವುದನ್ನು ಓದಿದಾಗ. ಹುಡುಗು ಪಾಳ್ಯ. ದೊಂಬಿ ಕಟ್ಟಿ ಕೊಂಡು ಮಾವೊಟ್ಸೆಟುಂಗ್‌ರ ನಾಮಸಂಕೀರ್ತನೆ ಮಾಡುತ್ತಾ ಏನೇನೆಲ್ಲಾ ಮಾಡಿದರು ಅಂತ.

ಪೀಕಿಂಗಿನ ರಾಜ ರಸ್ತೆಯಲ್ಲಿರುವ ಶ್ರೀಮಂತರ ಹೊಟೇಲಾದ ಮಂಜೇಂದ್ರ ಭವನಕ್ಕೆ ನುಗ್ಗಿದರಂತೆ. ಜೇನು ಮುತ್ತಿದ ಹಾಗೆ ಮುತ್ತಿದರಂತೆ.

ಆ ಹೋಟಲಲ್ಲೋ ಹತ್ತುಜನ ಗಿರಾಕಿಗಳಿದ್ದರೆ ಇಪ್ಪತ್ತು ಜನ ಸೇವಕರು. ಮೂವತ್ತು ಜನ ಅಡಿಗೆ ಪರಿಚಾರಕರು, ಏನು ತಿಂಡಿ ಬಯಸಿದರೂ ಅಲ್ಲಿ ದೊರಕಿಸಿ ಕೊಡುತ್ತಾರೆ, ಕಲ್ಪವೃಕ್ಷ ಇದ್ದ ಹಾಗೆ ಆ ಹೋಟಲು, ಕರಿದ ಕಪ್ಪೆಕಾಲು ಬಡಿಸು ತ್ತಾರೆ, ಹನ್ನೆರಡು ರೂಪಾಯಿ. ಹುರಿದ ಹಾವಿನ ತುಂಡು ಇಡ್ತಾರೆ, ಹದಿನೈದು ರೂಪಾಯಿ. ಚಾಕಲೇಟ್ ಕೊಡ್ತಾರೆ ಇಪ್ಪತ್ತು ರೂಪಾಯಿ ಚಾ ಕುಡಿಸ್ತಾರೆ. ಇಪ್ಪತ್ತೈದು ರೂಪಾಯಿ. ಅನ್ನ ಹುಳಿ, ಮಾಂಸ, ಬಿರಿಯಾನಿ. ಇವನ್ನು ಸರಬರಾಜು ಮಾಡ್ತಾರೆ. ಒಂದು ಊಟ ಲಕ್ಷಣವಾಗಿ ಅಲ್ಲಿ ಮಾಡಿದರೆ ನಮ್ಮ ಮಂತ್ರಿಗಳ ತಿಂಗಳ ಸಂಬಳದಷ್ಟು ತೆರಬೇಕು. ಮಂತ್ರಿಗಳ ಸಂಬಳ ಅಷ್ಟೇ ಸಂಪಾದನೆಯಲ್ಲ !! ಆದರೆ ಹಲ್ಲು ಕಡ್ಡಿಯನ್ನು ಪುಕಟ್ಟು ಕೊಡುತ್ತಾರೆ. ಹಲ್ಲು ಕಡ್ಡಿ ತಂದಿಟ್ಟವನಿಗೆ ೨ ರೂಪಾಯಿ ಇನಾಮು ಕೊಡಬೇಕು ಅಷ್ಟೇ !

ಇಂತಹ ಹೋಟಲನ್ನು ಪೀಕಿಂಗಿನ ಶ್ರೀ ಸಾಮಾನ್ಯರು ಪ್ರವೇಶಿಸಲು ಸಾಧ್ಯವೇ? ಊರು ನೋಡುಕ್ಕೆ ಬಂದ ಅಮೆರಿಕನ್. ಯೂರೋಪ್ ಇತ್ಯಾದಿ ಪರದೇಶಿಗಳು ಮಾತ್ರ ಅಲ್ಲಿನ ಆತಿಥ್ಯ ಪಡೆಯಲು ಸಾಧ್ಯ.

ಚೀನೀ ರೆಡ್ ಗಾರ್ಡ್‌ಗಳಿಗೆ ಈ ವಿಷಯ ಗೊತ್ತು. ಮನೇನ ಮಾರಿ ಪರರಿಗೆ ಉಪಕಾರಿಯಾಗುವುದು ಅವರಿಗೆ ಸಹಿಸಲಿಲ್ಲ. ಒಂದು ದಿನ ಧನಿಷ್ಠಾ ನಕ್ಷತ್ರದಲ್ಲಿ ಮಂಜೇಂದ್ರ ಭವನಕ್ಕೆ ನುಗ್ಗಿದರು. "ಇನ್ನುಮೇಲೆ ಆರು ಆಣೆ ಕೊಟ್ಟರೆ ಹೊಟ್ಟೆ ತುಂಬಾ ಆಹಾರವನ್ನು ಬಂದ ಶ್ರೀ ಸಾಮಾನ್ಯರಿಗೆಲ್ಲಾ ಕೊಡಬೇಕು" ಅಂತ ಜುಲುಂ ಮಾಡಿದರು. ಆರಾಣೆಗಿಂತ ಹೆಚ್ಚು ಬೆಲೆಯ ಆಹಾರವನ್ನೇ ತಯಾರಿಸಬಾರದು ಎಂದರು. ಮಾವೋಟ್ಸೆಟುಂಗನ ಉಪದೇಶಾಮೃತದಿಂದ ಹಲವಾರು ವಾಕ್ಯಗಳನ್ನು ಉದ್ಧರಿಸಿದರು.

ಹೋಟೆಲಿನವರಾದರೂ ಈ ದೊಂಬಿ ಮುಂದೆ ಏನು ಮಾಡಲು ಸಾಧ್ಯ! ಊರ ಪೋಲೀಸಿನವರೆಲ್ಲ ರೆಡ್‌ಗಾರ್ಡುಗಳ ಅಧೀನ. ಹ್ಞೂ ಅಂದರು ಆ ದಿನದಿಂದ ಆ ಹೋಟಲಿನಲ್ಲಿ ೬ ಆಣೆಗೆ ಹೊಟ್ಟೆ ತುಂಬಾ ಊಟ.

ನಮ್ಮೂರಿಗೂ ರೆಡ್ ಗಾರ್ಡ್ಸ್ ಬರಬಾರದೆ ?

ಬಂದು ನಮ್ಮೂರ ಮಂಜೇಂದ್ರ ಭವನಗಳನ್ನು ಮಂತ್ರಬಾರದೆ ?

೫೦ ಪೈಸೆ ಮಸಾಲ್‌ದೋಸೆ ತಪ್ಪಿ ಹೋಗಬಹುದು. ಅದರಮೇಲೆ ಹಾಕುವ ೨೦ ಪೈಸೆ ಬೆಣ್ಣೆ ಸಿಗದೆ ಇರಬಹುದು. ೬೦ ಪೈಸೆಯ ಬಾದಾಮಿ ಬರ್ಫಿ ದೊರಕದೆ ಕೇವಲ ನೆನಪಾಗಬಹುದು,

ರೂಪಾಯಿ ಬೆಲೆಯ ಎಸ್ಪ್ರೆಸ್ಸೊ ಕಾಫಿ ಕಾಣದೆ ಇರಬಹುದು. ಅದನ್ನು ಸರಬರಾಜಿಸುವ ಸಣ್ಣ ಹೆಣ್ಣುಗಳು ಮಾಯವಾಗಬಹುದು.

ಆದರೆ ಹಸಿದವರಿಗೆಲ್ಲಾ ೨೫ ಪೈಸೆಯ ಹೊಟ್ಟೆ ತುಂಬಾ ತಟ್ಟೆ ಅನ್ನ ಹುಳಿ ಸಿಕ್ಕರೆ ಚೆಂದ ಅಲ್ಲವೇ ?

* * * *

ರೆಡ್ ಗಾರ್ಡುಗಳ ಹಾವಳಿ ಇಷ್ಟಕ್ಕೇ ನಿಲ್ಲುವುದಿಲ್ಲ ಅಂತನ್ನಬಹುದು ನೀವು. ದಿಟ. ಕಾಲೇಜು ಪ್ರೊಫೆಸರುಗಳನ್ನು ಕಾಲೇಜು ಮುಂದೆ ಕುರಿ ಮಂದೆಯಂತೆ ಕೂಡಿಸಿದರು ದಿಟ. ಪರೀಕ್ಷೆಮಾಡಿ ನಂಬರು ಕೊಡುವ ಪ್ರೊಫೆಸರುಗಳನ್ನು ಮಾತ್ರ ಅಲ್ಲ. ವಯಸ್ಸಾದ ಪಾಠ ಹೇಳುವ ಎಲ್ಲ ಮಂದಿಯನ್ನು ಜತೆ ಗೂಡಿಸಿದರು. ನಂತರ ಒಬ್ಬೊಬ್ಬರ ಬಟ್ಟೆಗಳನ್ನು ಪೂರ್ತಿಯಾಗಿ ಕಳಚಿ ಹಾಕಿದರು. ಗಣೇಶನ ಹಬ್ಬದ ಹೊಟ್ಟೆಗಳು, ಏಕಾದಶಿ ಹೊಟ್ಟೆಗಳು ರಂಜಾನಿನ ರೋಜಾ ಹೊಟ್ಟೆಗಳು. ಎನ್. ಜಿ. ಓ. ಹೊಟ್ಟೆಗಳು ಬಾಣಂತಿ ಹೊಟ್ಟೆಗಳು ರೇಷನ್ ಆಫೀಸಿನವರ ಹೊಟ್ಟೆ ಗಳು. ಹೀಗೆ ತರಹಾವಾರಿ ನಾನಾವಿಧದ ಹೊಟ್ಟೆಗಳ ಪ್ರದರ್ಶನ.

ಅಷ್ಟಕ್ಕೇ ರೆಡ್ ಗಾರ್ಡುಗಳಿಗೆ ಸಂತೋಷ ಆಗಲಿಲ್ಲ. ಎಲ್ಲಾ ಬಟ್ಟೆಗಳನ್ನು ಕಳಚಿದರು. ನಂತರ ಕಾಲೇಜು ಸುತ್ತ ನಡೆದಾಡಿಸಿದರು, ಪ್ರೊಫೆಸರುಗಳನ್ನು. ಹುಚ್ಚು ಹೆಣ್ಣಿನ ಮದುವೆಯಲ್ಲಿ ಓಲಗದವರು ಓಡಾಡಿದಂತೆ ಅವರುಗಳು ಓಡಾಡಿದರು. ಪಾಪ ಪ್ರೊಫೆಸರುಗಳಿಗೆ ತುಂಬಾ ನಾಚಿಕೆ ಆಗಿದ್ದಿರಬೇಕು.

ಇರಬಹುದು, ಆದರೆ ನಮ್ಮೂರಿಗೆ ರೆಡ್ ಗಾರ್ಡುಗಳು ಬಂದು, ಇದೇ ತರಹ ಹಾವಳಿ ಮಾಡಿದರು ಅಂತಲೇ ಇಟ್ಟುಕೊಳ್ಳೋಣ, ನಮ್ಮ ಪ್ರೊಫೆಸರುಗಳಿಗೆ ಅಂತಹ ನಾಚಿಕೆಯೇನು ಆಗುಲ್ಲವಲ್ಲ !

"ಎಲ್ಲರೂ ಎಣ್ಣೆನೀರು ಹುಯಿಕೊಳ್ಳುವುದಕ್ಕೆ ಹೋಗುತ್ತಿದ್ದೀವಿ, ಹಬ್ಬ ಹರಿದಿನ ಅಂದರೆ ಹೊಟ್ಟೆ ತುಂಪಾಗದೆ ಇದ್ದರೂ ನೆತ್ತಿ ತುಂಪುಮಾಡಿಕೊಳ್ಳಬಹುದಲ್ಲ" ಅಂತ ಅಂದುಬಿಡ್ತಾರೆ. ಅಲ್ಲವೇ !

—ಕುಮಾರ್

ಪಾನನಿರೋಧವು ಎಲ್ಲೆಡೆ ಬಂದರೆ
ಭೂಮಿಗೆ ಇಳಿವುದು ಸಗ್ಗ
ಹೀಗೆಯೇ ಭಾಷಣ ಬಿಗಿದನು ಪುಢಾರಿ
ಏರಿಸಿ ನಾಲ್ಕೈದು ಪೆಗ್ಗ

—ನಿಶಾಚರ

ನಿದ್ದೇನೇ ಬರುಲ್ಲ

"ಎದ್ದೇಳೋ ಲೇ ! ಎಷ್ಟು ಹೊತ್ತೋ ಮಲಗೋದು ಥೂ ಥೂ"
ನನ್ನ ತಮ್ಮನ ಧ್ವನಿ ಕಿವಿಗೆ ತುಸು ತುಸು ಕೇಳಿಸಿತು.
"ಕಾಫಿ ತಿಂಡಿ ಆರಿಹೋಗುತ್ತೆ, ಏಳಪ್ಪಾ ಕೊರವ"
ಅಮ್ಮನ ಆದರದ ಮಾತು ಸ್ವಲ್ಪ ಕೇಳಿಸಿತು.

"ಇನ್ನೂ ಏಳಲಿಲ್ವಾ ಎಂಥ ಶೋಂಭೇರಿ, ಬೇಗ ಎದ್ದು ಸ್ನಾನ ಸಂಧ್ಯಾವಂದನೆ ಹೋಗಲೀ ಕಡೆಗೆ ಎರಡು ಆಚಮನ ಆದರೂ ಮಾಡಬೇಡವೇ"

ಎಲ್ಲೋ ದೂರದಿಂದ ಅಪ್ಪನ ಧ್ವನಿ ಕೇಳಿಸಿತು, ಅಮ್ಮನ ಧ್ವನಿಯನ್ನು ಅಪ್ಪನ ಧ್ವನಿಯೂ ಹಿಂಬಾಲಿಸುವುದು ವಾಡಿಕೆ,

ದಿನ ಬೆಳಗಾದರೆ ಇದೇ ಉದಯರಾಗಗಳು. ಸೂರ್ಯವಂಶದಲ್ಲಿ ಹುಟ್ಟಿದವನು ನಾನು. ದೊಡ್ಡವರು ಮೊದಲೆದ್ದು ಹೊರಟಮೇಲೆ ನಾನು ಎದ್ದು ಹಿಂಬಾಲಿಸುವುದು ಶ್ರೇಯಸ್ಕರ ಅಂತ ಸ್ವಲ್ಪ ಆರಾಮವಾಗಿ ಬಿದ್ದುಕೊಂಡಿದ್ದರೆ, ಮನೆಯವರೆಲ್ಲರೂ ಈರೀತಿ ಪೀಡಿಸುತ್ತಾರೆ.

ರಾತ್ರಿಯೆಲ್ಲಾ ನಿದ್ದೇನೇ ಬರುಲ್ಲ. ಬೆಳಗಿನ ಝಾವ ಸ್ವಲ್ಪ ಜೊಂಪು ಹತ್ತುತ್ತೆ ಅಷ್ಟೆ. ಆದರೂ ಮನೆಯವರಾಡಿಕೊಳ್ಳುವುದನ್ನು ಕೇಳಿದರೆ ನಂಬಿಕ್ಕೇ ಆಗುಲ್ಲ. "ಕೊರವ ಮಲಗಿದ್ದಾಗ ಚೇಳು ಕುಟುಕಿತು. ನಾನು ನೋಡಿದೆ. ಆದರೂ ಅವ ಏಳಲೇ ಇಲ್ಲ" ಅಂತ ಸೋದರಮಾವ ಅಂತಾನೆ.

"ಕೊರವ ಮಲಗಿದ್ದಾಗ ಪಟಾಕಿ ಸಲ ಹಚ್ಚಿದ್ದೆ ಏಳಲೇ ಇಲ್ಲ" ಅಂತ ೯ ವರ್ಷದ ಮಾಧವಿ ತೊದಲುತ್ತಾ ನಗುತ್ತಾಳೆ ೩-ಅವ ಏಳಿಗೆ ಒಂದೇ !

"ಕೊರವ ಮಲಗಿದ್ದಾಗ ಎರಡು ಚೊಂಬು ತಣ್ಣೀರು ಹಾಕಿದೆ, ಹಾಸಿಗೆ, ತಲೆ, ಮೈಯೆಲ್ಲಾ ಒದ್ದೆಯಾದರೂ, ಭಡವ ಏಳಬೇಕಲ್ಲ" ಅಂತ ಅಣ್ಣನ ಅಂಬೋಣ.

"ಹತ್ತು ಗಂಟೆಗೆ ತಂಗೀನ ಧಾರೆ ಎರೆದುಕೊಟ್ಟಾಗ, ಕೊರವ ನಿದ್ರೆ ಮಾಡ್ತಾ ಇದ್ದ, ಮದುವೇ ಮನೇಲಿ" ಅಂತ ಅಮ್ಮಕೂಡ ಅಂತಾರೆ.

ಆಡೋರ ಮಾತನ್ನು ಕೇಳ್ತಾ ಕೂತರೆ, ನಿದ್ದೇನೇ ಬರುಲ್ಲ

ಕೊರವ

ಸಾಧು ವಲ್ಲ

ಹೆಬ್ಬಿ ಗುಂಬ್ಳಾಲೆ ಇಂಟರ್ ನ್ಯಾಷನಲ್ ಫುಟ್‌ಬಾಲ್ ಟೋರ್ನಮೆಂಟಿನ ಫೈನಲ್ಸ್ ಆಟವು, ಹೆಬ್ಬಿ ತೋಳಗಳು ಮತ್ತು ಗುಂಬ್ಳಾಲೆ ಗಿಡಗಗಳ ಮಧ್ಯೆ ನಡೆಯ ಬೇಕಾಯಿತು.

ಎರಡೂ ಟೀಮುಗಳು ಸಮಾನಸ್ಕಂಧರು. ಇಬ್ಬರು ಕುಸ್ತಿ ವಸ್ತಾದಿಗಳು ಒಂದೊಂದು ಟೀಮಿನಲ್ಲೂ ಇದ್ದರು. ಮೂವರು ಕಲಾಯಿ ಮಾಡುವವರು ಎರಡೂ ಟೀಮಿನಲ್ಲಿದ್ದರು, ಇಬ್ಬರು ಕಾಲೇಜು ವಿದ್ಯಾರ್ಥಿಗಳು, "ಇಸ್ಟೈನ್‌ಲೆಸ್" ಸ್ಟೀಲ್ ಪಾತ್ರೆಗಳನ್ನು ಮಾರುವನೊಬ್ಬ, ಹೀಗೆ ಎರಡೂ ಟೀಮು ಸುಮಾರು ಒಂದೇ ತರಹ ಶಕ್ತಿಯನ್ನು ಹೊಂದಿದ್ದವು.

ಹೆಬ್ಬಿ ತೋಳಗಳ ಕ್ಯಾಪ್ಟನ್ ಕೆಂಚಪ್ಪ, ಹೆಸರಿಗೆ ತಕ್ಕಂತೆ ಬಣ್ಣ ಹೊಂದಿದ್ದ, ಅವನೇ ಸೆಂಟರ್ ಫಾರ್ವರ್ಡ್, ತೋಳ ಓಡಿದ ಹಾಗೆ ಸರ್‍ರಂತ ಓಡುವವ. ಆಟ ದಲ್ಲಿ ಯಾವ ಚಾಕಚಕ್ಯತೆಯನ್ನು ಉಪಯೋಗಿಸಬೇಕು. ಯಾವ ರೀತಿ ರಕ್ಷಣಾವ್ಯೂಹ ಕಟ್ಟಬೇಕು, ಹೇಗೆ ಮುನ್ನುಗ್ಗಬೇಕು, ಎಲ್ಲವನ್ನೂ ಅವನೇ ಯೋಚಿಸಿ ಕಾರ್ಯಗತ ಮಾಡುತ್ತಿದ್ದ.

ಗುಂಬ್ಳಾಲೆ ಗಿಡಗಳ ಟೀಮಿಗೆ ಬಾಷಾ ಕ್ಯಾಪ್ಟನ್. ಅಲ್ಲಾರೇ ಅಂತ ಘೋಷಣೆ ಮಾಡುತ್ತಾ ಅವ ಚೆಂಡನ್ನು ಪಾದಗಳಿಂದ ಕಚ್ಚಿಕೊಂಡರೆ ಬಡಪೆಟ್ಟಿಗೆ ಬಿಡಿಸಿಕೊ ಳ್ಳಲು ಸಾಧ್ಯವಾಗುತ್ತಿರಲಿಲ್ಲ. ವಸ್ತಾದಿ ಆದರೂ ರಭಸದಿಂದ ಓಡುತ್ತಿದ್ದ. ಆ ಟೀಮಿನ ಕಾರ್ಯವ್ಯೂಹಗಳನ್ನೆಲ್ಲ ಅವನೇ ರಚಿಸುತ್ತಿದ್ದ. ಟೀಮಿನ ಮೆದುಳು ಅವನು. ಸಹಆಟಗಳಲ್ಲಿ ಕರಿಯಪ್ಪ ಹೆಸರಾಂತ ಆಟಗಾರ. ಗೋಲ್‌ಕೀಪರ್ ಸ್ಥಾನದಲ್ಲಿ ಆಡುವ ಕರಿಯಪ್ಪ ರಾಜ್ಯ ಮಟ್ಟದ ಮನ್ನಣೆ ಪಡೆದಿದ್ದ, ಬಾಷಾ, ಕರಿಯಪ್ಪ ಇಬ್ಬರೂ ಒಂದೇ ಗರಡಿಯವರು. ಕರಿಯ ಗೋಲಿನಲ್ಲಿ ನಿಂತರೆ ಗೋಡೆ ಹಾಕಿದ ಹಾಗೆ, ಯಾರೂ ನಮ್ಮ ಮೇಲೆ ಗೋಲು ಬಾರಿಸಲು ಆಗುಲ್ಲ ಎಂದು ಬಾಷಾ ಜಂಭ ಕೊಚ್ಚಿಕೊಳ್ಳುತ್ತಿದ್ದ, ನಾವು ಗೆಲ್ಲುಕ್ಕೆ ಆಗದೆ ಇದ್ದರೂ ಪಂದ್ಯ "ಸಮ" ಆಗೇ ಆಗುತ್ತೆ ಅಂತ ಅವನ ಧೈರ್ಯ.

ಫೈನಲ್ಸ್ ಪಂದ್ಯದ ದಿನ ಎರಡೂ ಟೀಮುಗಳ ಆಟಗಾರರ ನೆಂಟರೆಲ್ಲರೂ ಗಿರಕಾಯಿಸಿಕೊಂಡಿದ್ದರು. ನೆಂಟರ ಜತೆಯಲ್ಲಿ ಇಷ್ಟರೂ ಸೇರಿಕೊಂಡಿದ್ದರು. ಸುಮಾರು ಸಂತೆ ಸೇರಿತ್ತು. ಆಟದ ಪಾಡು ಹೇಗಾದರೂ ಇರಲಿ. ಈ ಸಂತೆ ಸೇರಿದ ಜನ ಆಟದ ಫಲಿತಾಂಶಗಳನ್ನು ನೋಡಿಕೊಂಡು ತಮ್ಮ ತಮ್ಮಲ್ಲೇ ಕುಸ್ತೀಗೆ ಶುರು ಮಾಡಿದರೂ ಮಾಡಬಹುದು ಎಂಬ ದೂರಾಲೋಚನೆಯಿಂದ ಅಧಿಕ ಸಂಖ್ಯೆಯಲ್ಲಿ ಪೋಲೀಸಿನವರು ನೆರೆದಿದ್ದರು, ಕುದುರೆಯನ್ನೇರಿದ ರಾವುತರು ನಾಲ್ಕು ಜನ ನಾಲ್ಕೂ ಮೂಲೆಗಳಲ್ಲಿ ಶಾಂತಿಪಾಲನೆಗಾಗಿ ನಿಂತಿದ್ದರು. ಇವರೆಲ್ಲರೂ ಅಲ್ಲದೆ ಕಡಲೆಕಾಯಿ, ಬಟಾಣಿ ಮಾರುವವರ ಸಂಖ್ಯೆ ಏನೂ ಕಡಿಮೆ ಇದ್ದಿಲ್ಲ. ಮುಖ್ಯ ಎರಡೂ ಊರು ಗಳ ಯುವಕರೆಲ್ಲ ಅಲ್ಲಿ ಸೇರಿದ್ದರು. ಯುವತಿಯರೂ ಕೂಡ ಕೂಡಿಕೊಂಡಿದ್ದರು.

ಅಂಪೈರುಗಳು ಮೈದಾನಕ್ಕೆ ಇಳಿದರು. ಹಿಂದೆಯೇ ಕೆಂಚಪ್ಪನು ಸಹ ಆಟಗಳೊಂದಿಗೆ ಓಡುತ್ತಾ ಮೈದಾನದ ಮಧ್ಯಕ್ಕೆ ಹೋದ. ಅವನ ಪಕ್ಕದಲ್ಲೇ ಬಾಷಾ ತನ್ನ ಜತೆಗಾರರೊಡನೆ ಆಟಕ್ಕೆ ಇಳಿದ, ಆಟ ಶುರುವಾಯ್ತು.. ಅರ್ಧಗಂಟೆ ಆಟವಾಯಿತು. ಎರಡೂ ಕಡೆಯವರು ಸಾಹಸಪಟ್ಟು ಆಡಿದರು. ಕೆಂಚಪ್ಪನ ಕೈಯೇ ಮೇಲುಗೈಯಾದರೂ ಅವನ ಕಡೆಯವರು ಎಷ್ಟೋ ಮುನ್ನುಗ್ಗಿದರೂ ಏಳೆಂಟು ಬಾರಿ ಗೋಲಿನ ಕಡೆಗೆ ಚೆಂಡನ್ನು ಬಾರಿಸಿದರೂ, ಕರಿಯಪ್ಪ ಅಲ್ಲಿ ಕೋಟೆಯಂತೆ ನಿಂತು ಗೋಲಾಗುವುದನ್ನು ತಡೆದಿದ್ದ.

೨೦ ನಿಮಿಷ ವಿರಾಮ ಬಂತು. ನಿಂಬೆ ಹೋಳು ಚೀಪುತ್ತಾ ಕೆಂಚಪ್ಪ ತನ್ನ ಜತೆಗಾರರಿಗೆ ಏನೇನೋ ಗುಟ್ಟು ಹೇಳಿದ. ಅನಂತರ ತಟಕ್ಕಂತ ಮೈದಾನದ ಅಂಚಿಗೆ ಓಡಿದ. ಯಾಕೆ ಓಡಿದ ಅಂತ ಯಾರಿಗೂ ಗೊತ್ತಾಗಲಿಲ್ಲ, ಅಂಚಿನಲ್ಲಿ ನಿಂತಿದ್ದ ಹೆಣ್ಣು ಮಕ್ಕಳ ಹತ್ತಿರ ಎರಡು ಮಾತನಾಡಿದ. ತಿರುಗಿ ಓಡಿಬಂದ; ಹೆಣ್ಣು ಮಕ್ಕಳಿಬ್ಬರು ಮೈದಾನದ ಅಂಚಿನಿಂದ ಹೊರಟರು.

ಆಟ ಶುರುವಾಯ್ತು. ಐದು ನಿಮಿಷ ಆಗಿರಬಹುದು, ವೇಗವಾಗಿ ಚೆಂಡನ್ನು ಸಾಗಿಸಿಕೊಂಡು ಕೆಂಚಪ್ಪ, ಬಾಷಾಕಡೆಯ ಗೋಲಿನತ್ತ ಓಡಿದ. ಗೋಲಿಗೆ ಚೆಂಡನ್ನು ಬಾರಿಸಿದ, ಅರೆಕ್ಷಣಮುಂದೆ ಕರಿಯಪ್ಪ ಕೈಚಾಚಿದ್ದರೆ ಗೋಲು ತಪ್ಪುತ್ತಿತ್ತು. ಆದರೆ ಕರಿಯಪ್ಪ ಅರೆಕ್ಷಣ ಹೊತ್ತಾಗಿ ಕೈಚಾಚಿದ್ದ. ಗೋಲ್ ಆಗಿಹೋಗಿತ್ತು.

ಇದೇರೀತಿ ಕೆಂಚಪ್ಪನ ಸಂಗಡಿಗರುಮುನ್ನುಗ್ಗಿ ಬಾರಿಸಿದ್ದೆಲ್ಲಾ ಗೋಲ್ ಆಯಿತು. ನಾಲ್ಕು ಗೋಲುಗಳು ಈ ರೀತಿ ಹೆಬ್ಬಿ ತೋಳಗಳಿಗೆ ದೊರಕಿದುವು, ಗುಬ್ಬಾಲೆಗಿಡಗಗಳು ಪುಕ್ಕ ಕಳೆದುಕೊಂಡಂತೆ ಖಿನ್ನರಾಗಿದ್ದರು. ಆಟಮುಗಿಯುತ್ತಿತ್ತು.

ಬಾಷಾ, ಕರಿಯಪ್ಪನ ಬಳಿಗೆ ಓಡಿದ. "ಯಾಕಲ್ಲಾ ! ಹಾಗೆ ಗೋಲು ಬಿಟ್ಟೆ. ಸುಲಭವಾಗಿ ತಡಿಯಬಹುದಾಗಿತ್ತಲ್ಲ ! ಏನು ರೋಗ ಬಂತು ಈ ಅರ್ಧ ಆಟದಲ್ಲಿ" ಎಂದು ಕ್ಯಾಕರಿಸಿದ. "ಏನು ಇಲ್ಲ, ಕಣಲ್ಲಾ ಕೆಂಚಪ್ಪ ಚೆನ್ನಾಗಿ ಆಡಿದ. ಗೋಲಿನ ಎಡಗಡೆಗೆ ಬಾರಿಸ್ತಾನೆ ಅಂತಿದ್ದೆ. ಆದರೆ ಬಲತುದಿಗೆ ಬಾರಿಸ್ದ ಬೆಪ್ಪಾದೆ." ಎಂದ. ಇದನ್ನು ಬಾಷಾ ನಂಬಲಿಲ್ಲ. ಅಂತಹ ಜಾಣ ಕರಿಯಪ್ಪ ಹಠಾತ್ತಾಗಿ ಪೆಚ್ಚಾಗ ಬೇಕಾದರೆ ಏನಾರ ಕಾರಣ ಇರಬೇಕು ಅಂತುದುಕೊಂಡ, ಗೋಲ್ ಪಕ್ಕಗಳಿಗೆ ಕಣ್ಣುಹಾಯಿಸಿದ. ಅಲ್ಲಿ ಕಂಡುದೇನು ಅಂತ ? ಕೆಂಚಪ್ಪನ ತಂಗಿಯರಿಬ್ಬರೂ ಮೋಜಿನಮೇಲೆ ನಿಂತಿದ್ದರು, ಶಿಲಾಬಾಲಿಕೆಯರ ತರಹ ನಿಂತಿದ್ದರು. ಬಾಷಾನಿಗೆ ಅರ್ಥವಾಯಿತು, ಓಡಿದ ಮೈದಾನದ ಮಧ್ಯಕ್ಕೆ. ಕೆಂಚಪ್ಪನ್ನ ಹಿಡಿದುಕೊಂಡ. "ಲೇ ! ಹೀಗೆ ಮೋಸಮಾಡಬಾರದು, ಅದು ಸಾಧುವಲ್ಲ. ನಮ್ಮ ಗೋಲಿನ ಹತ್ತಿರ ನಿನ್ನ ಚೆಂದದ ತಂಗಿಯರನ್ನು ನಿಲ್ಲಿಸಿ, ಕರಿಯಪ್ಪ ಗೋಲು ಬಿಡೋ ಹಾಗೆ ಮಾಡಿದ್ದು ನಿಯತ್ತಲ್ಲ" ಅಂತ ಅಂದ.

ಆದರೇನು ? ಹೆಬ್ಬಿ ತೋಳಗಳು ತೋಡಾ ತೊಟ್ಟ ವರಂತೆ ಉಬ್ಬಿದ್ದರು.

—ಬಚ್ಚ

ಆರೋಗ್ಯವೇ ಭಾಗ್ಯ

ನಿಮ್ಮ ರೋಗಗಳನ್ನು ನಿರ್ಮೂಲನಮಾಡಲು
ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು
ಯೌವ್ವನ, ಉತ್ಸಾಹ, ಚೇತನ ತುಂಬಿದವರಾಗಲು

ಕಠಿಣ ನಿಯಮಗಳನ್ನನುಸರಿಸಿ ಶುದ್ಧ ರೀತಿಯಲ್ಲಿ ತಯಾರಿಸಿದ
ಶಾಸ್ತ್ರೀಯ ಆಯುರ್ವೇದದ ಔಷಧಗಳನ್ನುಪಯೋಗಿಸಿ

ನರದೌರ್ಬಲ್ಯವಿದ್ದರೆ, ಹಸಿವು ಮಂದವಾದರೆ, ಮರೆವು ಹೆಚ್ಚಾದರೆ,
ಮನಸ್ಸು ಬೆದರಿದರೆ, ವಾಯುದೋಷವಿದ್ದರೆ, ಮಲಬದ್ಧತೆಯಿದ್ದರೆ,
ವ್ಯಾಕುಲಗಳಿದ್ದರೆ

ನಮಗೆ ಬರೆಯಿರಿ, ಅಥವಾ ನಮ್ಮನ್ನು ಭೇಟಿಮಾಡಿರಿ.

ಪತ್ರವ್ಯವಹಾರಗಳನ್ನು
ವಿಶ್ವಾಸನೀಯವಾಗಿ, ಪವಿತ್ರವಾಗಿ ನಡಸುತ್ತೇವೆ

★

ಮುಖ್ಯ ವೈದ್ಯರು :

ಶಂಕರ್ ಫಾರ್ಮಸಿ

ಭದ್ರಾವತಿ : : ಮೈಸೂರು ರಾಜ್ಯ

Edited and Published by M. Sivaram
Printed by B. S. Iyengar, Bangalore-2